ಚಿನ್ಮಯದಾಸರವರ ಯಕ್ಷಗಾನ

CC-O. In Public Domain. Digitized by eGangotri

ಶನಿದೇವರ ಮಹಾತ್ಮೆ

ಮುದ್ರಣ: 1987

ಪ್ರಕಾಶಕರು :

ಪ್ರಕಾಶ್ ಬುಕ್ ಡಿಪೋ

ಬಸ್ ಸ್ಟ್ಯಾಂಡ್, ಶಿವಮೊಗ್ಗ-577201

ಬೆಲೆ 2-50

Sri Vidyabharathi Book Centre, Sringeri

CC-O. In Public Domain. Digitized by eGangotri

ದ್ವಿಪದೆ ॥ ಶ್ರೀರಾಮ ರಘುರಾಮ ಕೌಸಲ್ಯರಾಮಾ । ಶ್ಯಾಮಸುಂದರ ನೀನು ಭಕ್ತಜನಪ್ರೇಮಾ ॥ ೧ ॥ ಸಾಮಜವರದನೆ ಸ್ವಾಮಿ ಶ್ರೀರಾಮ । ಕಾಮಿತಾರ್ಥಗಳಕೊಡುವ ಕಾಮಪಿತಶ್ಯಾಮಾ ॥ ೨ ॥ ನಿರ್ಮಲಾತ್ಮಕ ನೀನು ನಿಜಗುಣಧಾಮಾ । ಕಾಮಿನಿಗೆ ವರವಿತ್ತ ಆ ಮಹಾಮಹಿಮಾ ॥ ೩ ॥

ವಚನ ॥ ಇಂತೆಂದು ಶ್ರೀಮನ್ನಾರಾಯಣ ಮೂರ್ತಿಯಾದ ಶ್ರೀ ರಾಮಚಂದ್ರನನ್ನು ಭಜಿಸಿ ಜಗನ್ಮಾತೆಯಾದ ಶ್ರೀ ಲಕ್ಷ್ಮೀದೇವಿಯನ್ನು ಏನೆಂದು ಕೊಂಡಾಡುತಿರ್ದಾರದೆಂತೆನೆ.

ಏಕತಾಳ ॥ ರಾಮಚಂದ್ರನ ರಾಣಿ ರಾಜೀವಲೋಚನೆ । ಪ್ರೇಮದಿಂ ಭಕ್ತರ ಕಾಯೂವರಾಣೀ ॥ ೧ ॥ ಬೇಡಿದಾ ವರಗಳ ಭಕ್ತರ್ಗೆ ಕೊಡುವೊಳೇ । ಬಿಡದಂತೆ ಬಡವರಿಗೆ ಕಾಪಾಡು ತಾಯೇ ॥ ೨ ॥ ನಿನ್ನ ನಂಬಿದಮ್ಯಾಲೆ ಭಯವಿಲ್ಲ ಜನರಿಗೇ । ಕಾಮಿತಫಲಗಳೂ ಕೊಟ್ಟು ನೀ ಕಾಯೇ ॥ ೩ ॥

ವಚನ ॥ ಇಂತೆಂದು ಶ್ರೀ ಜಗನ್ಮಾತೆಯಾದ ಶ್ರೀ ಮಹಾಲಕ್ಷ್ಮೀ ದೇವಿಯನ್ನು ಕೊಂಡಾಡಿ ಸರ್ವಸಿದ್ಧಿಪ್ರದಾಯಕನಾದ ಶ್ರೀ ವಿಘ್ನೇಶ್ವರನನ್ನು ಏನೆಂದು ಕೊಂಡಾಡುತಿರ್ದಾರದೆಂತೆನೆ

ಜಂಪೆ ॥ ಓನ್ನಮೋಗಣರಾಜ । ಓನ್ನಮೋವಿಘ್ನರಾಜಾ । ಓನ್ನಮೋ ಏಕದಂತಾ । ಮೋದುಕಹಸ್ತಾ ॥ ೧ ॥ ವೇದವೇದಕವೇದ್ಯಾ । ಸುಂದರ ಗಣನಾಥ । ಸಾಧುಸಜ್ಜನಪಾಲಾ । ಸ್ವಾಮಿಗಣನಾಥಾ ॥ ೨ ॥ ಮೂರು ಲೋಕಕೆದೇವಾ । ಮೂರು ದೇವಿಗೆ ಮುಖ್ಯಾ । ಅಭಯಕೊಟ್ಟು ಕಾಯೋ ಶಂಕರಪುತ್ರಾ ॥ ೩ ॥

ವಚನ । ಇಂತೆಂದು ಸರ್ವಸಿದ್ಧಿಪ್ರದಾಕನಾದ ವಿಘ್ನೇಶ್ವರನನ್ನು ಭಜಿಸಿ ಶಾರದಾಂಬಿಕೆಯಾದ ಶ್ರೀ ಶಾರದಾದೇವಿಯನ್ನು ಏನೆಂದು ಕೊಂಡಾಡುತಿರ್ದಾರದೆಂತೆನೆ

ಏಕತಾಳ ॥ ಶಾರದಾಂಬೆ ನೀನೂ । ಮೊರೆಹೊಕ್ಕ ನಿಮ್ಮಾನು । ಮರಿಯದೆ ಪಾಲಿಸೆ । ಬ್ರಹ್ಮನರಾಣೀ ॥ ೧ । ಬ್ರಹ್ಮನಸತಿ ನೀನೇ ।

Sri Vidyabharathi Book Centre, Sringeri

CC-O. In Public Domain. Digitized by eGangotri

ಮತಿಗೆಮಂಗಳಕೊಡೇ । ಸಂಭ್ರಮಗುಣಪ್ರಿಯೇ ೧ ಶಾರದಾಂಬಿಕೇ । ೨ । ನಾಲ್ಕುವೇದಕೆ ಕರ್ತ । ನಾಲ್ಕುಮುಖಾನ ಸತಿಯೇ । ಲೋಕಲೋಕಕೆ ತಾಯೆ । ಸಕಲಪಾವಿನೀ । ೩ ।

ವಚನ ॥ ಇಂತೆಂದು ಶಾರದಾಂಬಿಕೆಯಾದ ಸರಸ್ವತಿಯನ್ನು ಭಜಿಸಿ ತನ್ನ ಕುಲದೇವರಾದ ಶ್ರೀ ವೆಂಕಟೇಶ್ವರಸ್ವಾಮಿಯನ್ನು ಏನೆಂದು ಕೊಂಡಾಡುತಿರ್ದಾರದೆಂತೆನೆ.

ತ್ರಿಪುಡೆ । ಕಲಿಯುಗಕೆ ವೈಕುಂಠ । ತಿರುಪತಿವೆಂಕಟೇಶನೇ ಯನ್ನು ರಕ್ಷಿಸೋ । ಒಲಿದು ವರಗಳಕೊಡು । ದೇವನೆ ವೆಂಕಟೇಶಾ ೧ ೧ ॥ ಹರಿಯೆ ನಿಮ್ಮಯ ಚರಣನಂಬಿದೆ । ಮರಿಯದೆ ಯನ್ನ ಕಾಯೋದೇವನೆ । ಮೂರು ಲೋಕವನಾಳ್ವ । ಶ್ರೀ ಹರಿವೆಂಕಟೇಶಾ ೧ ೨ । ಭಾವನಗರದ ಬಾಲೆ ಸ್ಮರಿಸಲು ಭಾವದಂತೆ ವರಪಾಲಿಸೀ । ಪಾವನೋತ್ತಮ ನೀನು ೧ ಸಲಹಿದೆ ವೆಂಕಟೇಶಾ ೧೩ ।

ವಚನ । ಇಂತೆಂದು ಶ್ರೀ ವೆಂಕಟೇಶ್ವರ ಸ್ವಾಮಿಯನ್ನು ಭಜಿಸಿ ಮೋಕ್ಷದಾಯಕನಾದ ಸದ್ಗುರುಸ್ವಾಮಿಯನ್ನು ಏನೆಂದು ಕೊಂಡಾಡುತಿರ್ದಾರದೆಂತೆನೆ

ಜಂಪೆ । ಮಂಗಳಾತ್ಮಕನಾದ । ಲಿಂಗಾರ್ಯಗುರುದೇವ । ಲಿಂಗಾಂಗ ಸಮರಸಾ । ಲೀಲೆಯಿಂದಿರುಹೇ ।೧। ಆಗಮದ ಅರ್ಥವನು । ಸೊಗಸಾಗಿ ಚಿನ್ಮಯಗೇ । ಬೇಗಬೋಧಿಸಿ ಮತಿಯ । ನಿರ್ಮಲದಿ ನಿಲಿಸೇ । ೨ ಆದರಿಂದ ಸುಜ್ಞಾನ । ಆಕ್ಷಣ ಒಲಿಯಲೂ । ಸಾಧುಸಜ್ಜನಸಂಗ । ದೊಳಗೆ ತಾನಿರಲೂ ।೩।

ವಚನ॥ ಇಂತೆಂದು ಮೋಕ್ಷದಾಯಕನಾದ ಸದ್ಗುರುವರನಂ ಕೊಂಡಾಡಿ ನವಗ್ರಹಗಳ ಮಹಿಮೆಯನ್ನು ಮುಂದೆ ಹೇಳುತಿರ್ದಾರದೆಂತೆನೆ.

ತ್ರಿಪುಡೆ॥ ಕಲಿಯುಗದಿ ಬಲವಂತರಾಜನು । ಬಲುಪರಾಕ್ರಮಿ ವಿಕ್ರಮೆಂಬೋನು ಲಲಿತವಾಗಿಹ ಉಜ್ಜಯಿನೆಂಬೋ । ಪಟ್ಟಣಕ್ಕೆ ತಾನೂ ॥ ೧॥ ದೊರೆಯು ಆಗಿ ರಾಜ್ಯವಾಳುತಾ ಪರಿಪರಿಯ ಸಂಭ್ರಮದಿ ಬಾಳುತಾ । ಕುರಿತುರಗ ಸಾಯುದ್ಧಳದ ಸೇನೆಯೊಳ್ । ಲೀಲೆಯಿಂದಾ ॥2॥ ಇರುತಲಿರುವನು ಶೂರ

Sri Vidyabharathi Book Centre, Sringeri

CC-O. In Public Domain. Digitized by eGangotri

ವಿಕ್ರಮ ನರಹರಿಯ ಭಜನೆಯನು ಮಾಡುತ ಧರಣಿಯೋಳು ಬಲವಂತ ವಿಕ್ರಮ । ಸಿಧ್ದಿಯಿಂದಾ ॥3॥

ವಚನ॥ ಇಂತೆಂದು ವಿಕ್ರಮರಾಯನು ಮಹಾ ಪ್ರಸಿದ್ಧನಾಗಿ ಕಲಿಯುಗದಲ್ಲಿ ರಾಜ್ಯವಾಳುತ್ತಿರಲು ಒಂದಾನೊಂದು ದಿವಸ ತನ್ನ ಸಭಾ ಸ್ಥಾನದಲ್ಲಿ ಕುರಿತು ಏನೆನ್ನುತಿದ್ದಾರದೆಂತೆನೆ।

ಜಂಪೆ॥ ವೇದಪಾಠಕರಾದ । ಪಂಡಿತೋತ್ತಮರೊಡನೆ । ಮುದದಿ ಸಿಂಹಾಸನದಿ। ವಿಕ್ರಮನು ಕುಳಿತೇ ॥1॥ ಮುಂದೆಸೆವೋ ಓಲಗದಿ ವೇದವೆಂಬುವೊ ಸುಖದಿ । ಸಂದಸೌಖ್ಯದೊಳೆಸೆದು । ರಾಜತಾನಿರೆ ॥2॥

ವಚನ॥ ಇಂತೆಂದು ವಿಕ್ರಮರಾಜನು ಸಿಂಹಾಸನದಲ್ಲಿ ಕುಳಿತಿರೆ ಪಂಡಿತೋತ್ತಮರು ನವಗ್ರಹಗಳ ಚರ್ಚೆಯಂ ಮಾಡಲು ಕೇಳಿ ರಾಜನು ಏನೇನು ತಿದ್ದಾರದೆಂತೆನೆ.

ಏಕತಾಳ॥ ದೇವಬ್ರಾಹ್ಮಣರಾದ ಪಂಡಿತರೇ ಕೇಳನ್ನು। ನವಗ್ರಹ ದೊಳಗೆಲ್ಲಾ । ಬಲವಂತರಾರೂ ॥1॥ ನೀವೀಗ ಪೇಳೆಂದು ರಾಜ ವಿಕ್ರಮ ನುಡಿಯೆ ಸರ್ವಶಾಸ್ತ್ರಗಳಾದ। ಬ್ರಾಹ್ಮಣೋತ್ತಮರೂ 2 ಪರಿಪರಿ ವಿಧದಲಿ । ರಾಜ ವಿಕ್ರಮನೊಡನೆ। ಹರುಷದಿಂ ಪೇಳುತಲಿರ್ದರು ಅವರೂ 3

ವಚನ ।ಇಂತೆಂದೇ ಒಬ್ಬ ಪಂಡಿತನು ನವಗ್ರಹಗಳ ಪೈಕಿ ಸೂರ್ಯಗ್ರಹ ಮಹಾಶ್ರೇಷ್ಠನೆಂದೂ, ಸೂರ್ಯನ ಮಹಿಮೆಯನದ್ನ ಮತ್ತು ಪರಾಕ್ರಮವನ್ನೂ ಪೇಳುತಿರ್ದಾರದೆಂತೆನೆ.

ಜಂಪೆ ॥ ರಾಜಗ್ರಹವು ಸೂರ್ಯ। ರಾಜನು ತೇಜಾ ಮೂಜಗದೊಳ್ಖ್ಯಾತ ಸಹಜ ಈ ಮಾತು । ಅವನ ಅರ್ಥಿಸೋಜನಕೆ। ಬೇಡಿದಾ ವಕವಕೊಡುವ। ಸರ್ವಸಿದ್ಧಿಯುಳ್ಳ। ನಿರ್ಮಲಾ ಸೂರ್ಯಾ ।2!

ವಚನ। ಇಂತೆಂದು ಸೂರ್ಯನ ಮಹಿಮೆಯನ್ನ ಪೇಳುವ ಸಮಯದಲ್ಲಿ ರಡನೆಯ ಪಂಡಿತನು ಚಂದ್ರನ ಮಹಿಮೆಯನ್ನು ಪೇಳುತ್ತಿದ್ದಾರದೆಂತೆನೆ. ಎ

ಯಲ್ಲಪದಾ। ಚಂದ್ರನ ಮಹಿಮೆ ... ಸೌಖ್ಯ ಕೊಡುವೋನೂ। ಇಂದು ಶಾಂತರೂಪಾ ಕೇಳೈಯಾ ! ಓ ವಿಕ್ರಮಾ ರಾಜಾ। ಚಂದ॥

Sri Vidyabharathi Book Centre, Sringeri

CC-O. In Public Domain. Digitized by eGangotri

ನಿಂದಾ ಅಧಿಕಾವಿಲ್ಲಂದಾ ।೧। ಸರ್ವವೃಕ್ಷಕ್ಕೆ ದೊರೆ ತಾನೂ। ಸರ್ವಜಗಕೆ ಹರುಷಿತಾನೂ। ಶಿವನಶಿರಸಕೆಯೋಗ್ಯ ತಾನಿನ್ನೂ। ಓ ವಿಕ್ರಮ ರಾಜಾ॥ ಚಂ ಪ್ರಸಿಂದಾ ಅಮೃತಾ ಸುರಿಯೋದೂ ೨ ತಿಗಳಾಜಾತಿಯೇನು ಅವನು' ಜನಗಲ್ಲಾ ಯೋಗ್ಯತಾನೂ। ಮಂಗಳಾತ್ಮಕ ಚಂದಾ ಕೇಳಿನ್ನೂ॥ ಓ ವಿಕ್ರಮ ರಾಜಾ ಭೋಗಭಾಗ್ಯಕೊಡುವೋ ನವನಿನ್ನೂ ೩

ವಚನಾ॥ ಇಂತೆಂದು ಚಂದನ ಮಹಿಮೆಯನ್ನೂ ಪ್ರತಾಪವನ್ನೂ ಪೇಳುವ ಸಮಯದೊಳು ಮೂರನೆಯ ಪಂಡಿತನು ಮಂಗಳಗ್ರಹವು ಶ್ರೇಷ್ಠವೆಂದು ಪೇಳುತಿರ್ದಾರದೆಂತೆನೆ.

ಜಂಪೆ॥ ಕ್ರೂರ ಗ್ರಹವಿದು ಕೇಳು 1 ಪರಾಕ್ರಮಿ ಮಂಗಳನೂ ಆರು ಅರಿಯರು ಅವನ ॥ ಮಹಿಮೆಗಳನ್ನೂ ॥ ೧ ॥ ಜಗದೊಳಗೆ ಮಂಗಳಾ ಸಾಂಗದಿಂಭಜಿಸುವರಾ ॥ ಭೋಗಸಂಪದಕೊಡುವ ॥ ಮಂಗಳರಾಯಾ॥ ೨ ॥ ಬಿಡದೆಸ್ತುತಿಪಜನಕೆ ॥ ಸಧಗರದಿ ಆರೋಗ್ಯಾ ॥ ಕೊಡುವೋನು ಬಿಡದಂತೆ ॥ ಬಹು ಶ್ರೇಷ್ಠಜನಕೇ ॥ ೩ ॥ ಜಾತಿಯೊಳುಸುನಾರಾ ॥ ಪ್ರೀತಿಲಿಭಜಿಸುವರಾ ನೀತಿಯೋಳ್ ಸಲಹುವ ॥ ಪ್ರತ್ಯಕ್ಷರಾಯಾ ॥ ೪ ॥

ವಚನ ॥ ಇಂತೆಂದು ಅಂಗಾರಕನ ಮಹಿಮೆಯನ್ನು ಪೇಳುವ ಸಮಯದೊಳು ನಾಲ್ಕನೆಯ ಪಂಡಿತನು ಬುಧನೆಂಬ ಗ್ರಹವು ಮಹಾ ಬಲವಂತನು ಎಂದು ಬುಧನ ಮಹಿಮೆಯನ್ನು ಪೇಳುತಿರ್ದಾರದೆಂತೆನೆ.

ತ್ರಿಪುಡೆ ॥ಬುಧನೆಂಬೋಗ್ರಹವು ಬಲವಂತಾ॥ಅಂದದಿಂದಾ॥ ೧ ॥ ಭಾಗ್ಯ ಕೊಡುವಾ ॥ ಬುದ್ಧಿಯೊಳು ಪ್ರಸಿದ್ಧ ॥ ಬುಧನು ಕೇಳುಯೆಂದಾ ॥ ೧ ॥ ತೋರಿಜಾತೀಲಿ ವಾಣಿಯೆಂಬೋನು ಪರಹಿಂಸಕನಲ್ಲ ನಾತನೂ ಸಾರಿ ಅವನಲಿ ಭಕ್ತಿಯಿಟ್ಟರೆ ಕಾಯ್ವನವನೂ ॥ ೨ ॥

ವಚನ । ಇಂತೆಂದು ಪೇಳುವ ಸಮಯದಿ ಐದನೆಯ ಪಂಡಿತನು ಗುರುವು ಮಹಾ ಸಾಮರ್ಥ್ಯನೂ ಬಲವಂತನೂ ಎಂದು ಗುರುವಿನ ಮಹಿಮೆಯನ್ನು ಪೇಳುತಿರ್ದಾರದೆಂತೆನೆ

ಏಕತಾಳ। ಗುರುವು ಮಹಾಶ್ರೇಷ್ಠ । ಗುರುವು ಬಲವಂತಾ । ಗುರು ವಿಗಿಂತ ಅಧಿಕರು 1 ಯಾರೂ ಇಲ್ಲ ಜಗದೀ ।೧। ಗುರುವಿನ ಮಹಿಮೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಪೇಳಲು ಶಾಸ್ತ್ರನೇ | ಅಂಗೂ ಚಕನಲ್ಲ | ಕೇಸ್ಯು ಶುಯನಾ |೨| ಇನ್ನು ತ್ರಿಸಕೋಟಿ | ದೇವರುಭಜಿಸೋರೂ || ಏನುಪೇಳಲಿಯಿನ್ನೂ | ಇಂದ್ರಾನು ಮೊದಲೂ ||೩| ಜ್ಞಾನಕ್ಕೆ ಪೂಜ್ಯನು | ಅನುಮಾನಹರಿಸೋನು | ಘನವುಳ್ಳ ಬ್ರಾಹ್ಮಣ | ಕುಲದಾತನವನೂ |೪|

ವಚನ| ಇಂತೆಂದು ಗುರುವಿನ ಮಹಿಮೆಯನ್ನು ಪೇಳುವ ಸಮಯದ ಆರನೆಯ ಪಂಡಿತನು ಶುಕ್ರನು ಮಹಾಶ್ರೇಷ್ಠನೆಂದು ಶುಕ್ರನಮಹಿಮೆ ಯನ್ನು ಪೇಳುತಿದ್ದಾರದೆಂತೆನೆ

ಜಂಪೆ | ಶುಕ್ರನೆಂಬುವೊನವನೂ | ವಿಕ್ರಮರಾಯಕೇಳೂ | ಸಾಕಾರ ದೈತ್ಯರಿಗೆ | ಆಗಿತಾನಿಹನೂ |೧| ಆತನ ಪರಾಕ್ರಮಕ್ಕೆ ಮೂಜಗ ತಲ್ಲಣಿಸೇ ಮಂತ್ರಸಂಜೀವಿನಿ | ಆತನಲ್ಲಿರೇ |೨| ಅವನ ಭಜಿಸಿದ ನರರ | ಕಾರ್ಯೋನು ಅತಿಬೇಗಾ || ದೇವದೈತ್ಯರ ಸತ್ವ | ಗುಂದಿಸಿ ಇರುವಾ |೩|

ವಚನ | ಇಂತೆಂದು ಶುಕ್ರನ ಪ್ರತಾಪವನ್ನು ವಿಕ್ರಮರಾಯನು ಕೇಳಿ ಮನದಲ್ಲಿ ಆರು ಗ್ರಹಗಳ ಚಿಂತನೆಯಂ ಮಾಡಿ ಇವರು ಮಹಾ ಬಲ ವಂತರು ಇವರನ್ನು ಸ್ಮರಿಸಲು ಪೀಡೆ ಕಳೆಯುವುದೆಂದು ವಿಕ್ರಮರಾಯನು ಇನ್ನೂ ಬಾಕಿ ಗ್ರಹಗಳ ಚೈತನ್ಯ ಸಾಮರ್ಥ್ಯವಂ ಪೇಳಿ ಎನ್ನಲು ಪಂಡಿತರ ಪೇಳುತಿದ್ದಾರದೆಂತೆನೆ

ಏಕತಾಳ | ರಾಹುಕೇತುಗಳೆಂಬೋ | ರಾಕ್ಷಸನ ಕುಲದವರೂ | ಬಹು ಬಾಧೆ ನರರಿಗೆ | ಪಡಿಸೂವರವರೆ. |೧| ಸೂರ್ಯಚಂದ್ರಾದಿಗಳಿಗೇ | ಪೀಡಿಸುತ ಲಿಹರೂ | ನರಲೋಕದವರಿಗೇ | ಬಾಧೆಪಡಿಸೋರೂ ||೨|| ರಾಹುಚಂದ್ರನ ಪಿಡಿದೂ | ಕಾಡೋದು ಕೇಳಿನ್ನೂ | ಕೇತುಸೂರ್ಯಾನಪಿಡಿದೂ | ಬಾಧೆ ಪಡಿಸೋರೂ ||೩||

ವಚನ|| ಇಂತೆಂದು ರಾಹು ಕೇತುಗಳು ಮಹಾ ಕ್ರೂರಗ್ರಹಗಳೆಂದು ಹೇಳುವ ಸಮಯದೊಳು ವಿಕ್ರಮರಾಜನೊಡನೆ ಮತ್ತೊಬ್ಬ ಪಂಡಿತನು ಶನಿ ಗ್ರಹ ಮಹಾಶ್ರೇಷ್ಠನು. ಅವನ ಸತ್ಯಕ್ಕೆ ಎಣೆಯಿಲ್ಲವೆಂದು ಶನಿಮಹಾರಾಜನ ಪ್ರತಾಪವನ್ನು ಪೇಳುತಿದ್ದಾರದೆಂತೆನೆ.

ತ್ರಿಪುಡೆ|| ಕೇಳುವಿಕ್ರಮ ಶನಿಯ ಮಹಿಮೆಯ | ... ನು ಮನ

Sri Vidyabharathi Book Centre, Sringeri

CC-O. In Public Domain. Digitized by eGangotri

ವಿಟ್ಟಲಾಲಿಸು । ಕಾಲಭೈರವ ಪೂಜೆಮಾಡವ । ಶನಿಯು ಕೇಳೂ॥೧॥
ಎಲ್ಲ ಗ್ರಹಕ್ಕೆ ಶ್ರೇಷ್ಠನೆನಿಸಿಹ । ಬಲುಪರಾಕ್ರಮಿ ಶನಿಯಃರಾಜನೂ । ನೀಲ
ಕಂಠನು ಅವನ ಕಂಡರೆ । ಬೆದರುವನೂ ॥೨॥ ಕಪ್ಪುರೂಪವು ಧರಿಸಿ ಇರುವಾ
ವಪ್ಪದಿಂ ಕುಲದೊಳಗ್ರಗಣಿಗಾ । ಕೋಪದೃಷ್ಟಿಯೊಳು ತಾನು ನೋಡಲು॥
ಕಷ್ಟಕೊಡುವಾ ॥೩॥ ಶಾಂತನಾಗಿ ತಾನುವಲಿಯಲು। ಗೋತ್ರಯಿಲ್ಲದ ಭಾಗ್ಯ
ಕೊಡುವೊನು । ಸತ್ಪುರುಷ ಶನಿರಾಜ । ವಿಕ್ರಮ ಕೇಳು ನೀನು ॥೪॥

ವಚನ ॥ ಇಂತೆಂದು ಶನಿರಾಜನ ದೃಷ್ಟಿ ಚಮತ್ಕಾರಗಳನ್ನು ಪೇಳು ತಿರ್ದಾರರದೆಂತೆನೆ.

ಜಂಪೆ ॥ ಶನಿಯು ಜನ್ಮಿಸಿದಾಗ । ತನ್ನ ಪಿತಾನಮೇಲೆ । ಶನಿಯ
ದೃಷ್ಟಿಯು ಬೀಳುತಲು । ತನುಕಷ್ಟವಾಗೆ ॥ ೧ ॥ ರವಿಯು ಸಾರಥಿಕಾಲು
ಹೈಳವನಾದವು ನೋಡಃ ಅಶ್ವದಾ ಕಣ್ಣುಗಳ್ । ಕಾಣದೆ ಇರಲೂ ॥೨॥
ಏನೊಂದುಪಾಯವೂ । ಸಾಗದೆ ಇರಲೂ । ದಿನಕರನು ಕಷ್ಟಾದಿಗಳ
ವಳವುಗೊಳಲೂ ॥ ೩ ॥ ಆಗತಾ ಶನಿದೃಷ್ಟಿ । ಹಿಂದಕೇರಗಲೂ । ಆಗ
ಆರೋಗ್ಯ । ವಾಗುತಾ ಇರಲೂ ॥ ೪ ॥

ವಚನ ॥ ಇಂತೆಂದು ವಿಕ್ರಮರಾಯನು ಶನಿದೇವರ ಮಹಿಮೆಯ ಪ್ರತಾಪವನ್ನು ಕೇಳುತ್ತಾ ನಗುತ್ತಾ ಏನೆನ್ನುತಿರ್ದಾರದೆಂತೆನೆ.

ಏಕತಾಳ—ಅರ್ಧರೇಖು ॥ ಪುತ್ರನೇ ಇವನೇಗಾ । ಅಪ್ರುತಾನೆಂದಾ ।
ಸತ್ಪುತ್ರನಲ್ಲಾ ಇವ । ಮತಿಹೀನನೆಂದಾ ॥ ೧ ॥ ಪಿತನು ಪೀಡಿಸುವಂಥ ।
ಅತಿಭ್ರಷ್ಟನೆಂದಾ ॥ ಹುಟ್ಟುತಾ ತಂದೆಗೆ । ಕಷ್ಟವು ಕೊಟ್ಟಾ ॥ ೨ ॥
ಮುಂದೆಷ್ಟು ಕಷ್ಟವು । ಕೊಡುವೋನೋ ಎಂದಾ । ಚಪ್ಪಾಳೆ ಹಾಕುತ ।
ವಿಕ್ರಮನಗುತಾ ॥ ೩ ॥

ವಚನ ॥ ಇಂತೆಂದು ವಿಕ್ರಮರಾಯನು ಶನಿದೇವರನ್ನು ಹೀಯಾಳಿಸಿ ತಾನು ಘರ್ಜಿಸಿ ನಗುವಂಥ ಸಮಯದಿ ಆದ ಚಮತ್ಕಾರವನ್ನು ಪೇಳು ತಿರ್ದಾರದೆಂತೆನೆ.

ಪುಡೆ ॥ ವಿಮಾನದೊಳು ತಾಕುಳಿತು ॥ ಶನಿರಾಜಾ ಅಂತರಿಕ್ಷದೆ
ಪೋಗುತಿರಲೂ ಬಾಹ್ಮಣೋತ್ತಮನೊಡನೆ ವಿಕ್ರಮನುಡಿದ ಮಾತೂ ॥೧॥

Sri Vidyabharathi Book Centre, Sringeri

CC-O. In Public Domain. Digitized by eGangotri
ಕೇಳಿ ಶನಿದೇವ ತಾನು ತಕ್ಷಣ ಇಳಿದುಬಂದನು ಸಭಾಸ್ಥಾನಕೆ ಕಳವಳವು ಗೊಂಡೆದ್ದು ನಿಂತರು ಎಲ್ಲ ಜನರೂ ॥ ೨ ॥

ವಚನ ॥ ಇಂತೆಂದು ಶನಿದೇವರು ಸಭಾಸ್ಥಾನಕ್ಕೆ ಬರಲು ವಿಕ್ರಮ ರಾಜನು ಕಂಡು ಎದ್ದು ತಕ್ಷಣ ಶನಿದೇವರಿಗೆ ಸಾಷ್ಟಾಂಗ ನಮಸ್ಕಾರದಿಂದೆರಗಲು ಶನಿರಾಜನು ಕೋಪಾಟೋಪದಿಂದ ಏನೆಂದ್ ಆರ್ಡರಿದರೆಂತೆನೆ,

ಏಕತಾಳ ॥ ಏನೋ ರಾಜಾ ನಿನಗೇ । ಇಷ್ಟೊಂದು ಗರ್ವವೆ ನಿನ್ನಗರ್ವವು ನಾನು । ನೋಡಿ ಬಿಡಿಸುವೆ ॥ ೧ ॥ ಎನ್ನುತ ಶನಿದೇವಾ । ಕೋಪಾಗದೊಳು ತಾನೂ । ನನ್ನ ಚಮತ್ಕಾರ ತೋರುವ ಇನ್ನೊ ॥ ೨ ॥ ಕನ್ಯಾರಾಶಿಗೇನಾನು । ಬಂದೇನು ಕೇಳಿನ್ನು ಎನುತ ಶನಿದೇವಾ । ಹೇಳಿ ಹೊರಟಾನೂ ॥ ೩ ॥

ವಚನ ॥ ಇಂತೆಂದು ಶನಿದೇವರು ಹೇಳಿ ಹೊರಡುವ ಸಮಯದಿ ವಿಕ್ರಮರಾಜನು ಬಂದು ಶನಿದೇವರ ಚರಣಕ್ಕೆ ನಮಸ್ಕರಿಸಿ ನನ್ನ ಅಪರಾಧವನ್ನು ಕ್ಷಮಿಸಬೇಕೆಂದು ಬೇಡಿಕೊಳ್ಳಲು ಶನಿದೇವರು ಕೇಳದೆ ನನ್ನ ಮಹತ್ವವನ್ನು ತೋರುವೆ ನೋಡೆಂದು ಹೇಳಿಹೋಗಲು ರಾಯನು ಖಿನ್ನನಾದನದೆಂತೆನೆ,

ಯಾಲಪದ ॥ ಬಲುಪರಾಕಮಿ ಶನಿಯು । ಸುಮ್ಮನಿರದೇ ನಾವು ಆದೇ । ಬಲುಕಷ್ಟವಕೊಡುವೋನವನಿನ್ನೂ ॥ ಓ ಬ್ರಾಹ್ಮಣೋತ್ತಮರೇ ಕಲಿಪುರುಷನ ಮಹಿಮೆ ತಿಳಿಯಾದೂ ॥ ೧ ॥ ಎಂದೂ ಮನದೀ ಚಿಂತೆ ತಾಳಿ ॥ ನೊಂದುಕೊಂಡೂ ರಾಯಾ ತಾನೂ । ಕಂದಿಕುಂದೀ ಕಳವಳಾಗೊಂಡಾನೂ ॥ ಓ ಬ್ರಾಹ್ಮಣೋತ್ತಮರೇ । ಮಾಧವನೇ ಗತಿಯೆಂದಾನೂ ॥ ೨ ॥ ಹಣೇಬರಹಮೀರಿ ಆರೂ । ಬಾಳುವೋರೇ ಜಗದೊಳಗೇ ! ಅಣ ವಲ್ಲಾ ಬ್ರಹ್ಮಲಿಖಿತಾವೂ ॥ ಓ ಬ್ರಾಹ್ಮಣೋತ್ತಮರೇ । ಕ್ಷಣವಾದರೂ ತಪ್ಪಲರಿಯಾದೂ ॥ ೩ ॥ ಎಂದೂ ಎಲ್ಲರಿಗೂ ಕಳುಹೀ । ಬಂದಾ ತನ್ನ ಅಂತಃಪುರಕೇ । ಬುದ್ಧಿಮಂದವಾಗೀ ಹೋಯಿತೂ ॥ ಓ ಬ್ರಾಹ್ಮಣೋತ್ತಮರೇ । ಎಂದು ವಿಕ್ರಮ ಹರಿನಾ ಭಜಿಸಾಲೂ ॥ ೪ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ವಚನ ॥ ಇಂತೆಂದು ವಿಕ್ರಮರಾಯನು ತನ್ನ ಮಂದಿರಕ್ಕೆ ಬಂದ್ಹ ಸ್ನಾನ, ಸಾಂಧ್ಯಾ ಮತ್ತು ಭೋಜನಗಳಿಂದಲೂ, ನಿದ್ರಾಲಸ್ಯದಿಂದಲೂ, ಒಂದು ಮಾಸವನ್ನು ಹೀಗೆ ಕಳೆಯಲು ನಂತರ ಬ್ರಾಹ್ಮಣೋತ್ತಮರು ಬಂದು ಶನಿದೇವರ ಪೂಜೆ ಮಾಡಿರೆಂದು ರಾಯಂಗೆ ಪೇಳುತಿರ್ದಾರದೆಂತೆನೆ

ಜಂಪೆ ॥ ಶನಿರಾಜನಪೂಜೆ ಮಾಡೈಯ್ಯಾ ಹೀಗೆ ! ಎನ್ನುತಾ ಬ್ರಾಹ್ಮಣರೆಲ್ಲಾ ಹೇಳಿದರು ದೊರೆಗೆ ॥ ೧ ॥ ಕುದುರೆಹಲ್ಲೆಗಳಿಂದಾ॥ ಪ್ರತಿಮೆಮಾಡಿಸ್ಯೆ ಈಗ ಮುದದಿ ಕುಂಭದಮೇಲೆ ಇರಿಸೈಯ್ಯ ಬೇಗಾ॥ ೨॥ ಮೃತ್ತಿಕೆಯ ಕುಂಭದಲಿ ಪ್ರತಿಮೆಯನು ನಿಲ್ಲಿಸಿ ತೈಲದಿಂದಭಿಷೇಕ ಮಾಡು ಈ ರೀತಿ ॥ ೩ ॥ ಷೋಡಶೋಪಚಾರದಿಂದಾ ಮಾಡೈಯ್ಯ ಶನಿಪೂಜೆ ಕೊಡು ದಾನದವರ್ಗಗಳ ಸಡಗರದಿ ಬೇಗಾ ॥ ೪ ॥ ದೇವೀಸಜಪಸಸಹಸ್ರಾ ॥ ಸಾವಧಾನದಿ ಈಗ ಕ್ರಮವಾಗಿ ಮಾಡೈಯ್ಯ ಸರ್ವದಾನದಿಂದ ॥ ೫ ॥ ಕೂಷ್ಟವುಫಲದದಾನಾ ನೀಟಾಗಿಕೊಡಸ್ಯೆಯ್ಯ ಕಷ್ಟಬಾರದರೀತಿ ಶನಿದೇವ ಕಾಯ್ವಾ ॥ ೬ ॥

ವಚನ ॥ ಇಂತೆಂದು ಬ್ರಾಹ್ಮಣೋತ್ತಮರು ವಿಕ್ರಮರಾಜನೊಡನೆ ಶನಿದೇವರ ಪೂಜಾವಿಧಾನವನ್ನು ಹೇಳಲು ವಿಕ್ರಮರಾಜನು ಏನನ್ನು

ತಿರ್ದಾರದೆಂತೆನೆ.

ಏಕತಾಳ ॥ ಆಗದ್ದಾಗದು ಈಗಾ ಕೇಳಿರೈ ಬ್ರಾಹ್ಮಣರಿರಾ ಸಾಂಗದಿಂ ಶನಿಪೂಜೆ ಮಾಡೋಡೆ ಇಲ್ಲಾ ॥ ೧ ॥ ಸುಮ್ಮಾನೆಮಾಡುವುದ್ಯಾಕೆ ನಮ್ಮನು ಬಿಡೋದಿಲ್ಲಾ ನಮಗೆ ತಾಯಿತಂದೆ ಶನಿರಾಜಯೆಂದಾ ॥ ೨ ॥ ಆವನ ಮನಸಿಗೆ ಪ್ರೀತಿಬಂದಂತೆಮಾಡಲಿ ಭವರೋಗವೈದ್ಯಾನ ದಯೆಯೊಂದು ಇರಲೀ ॥ ೩ ॥ ಎಳ್ಳಷ್ಟು ತಪ್ಪದು ಬ್ರಹ್ಮಲಿಖಿತವನ್ನೂ ಕಳವಳ ಪಡೋದ್ಯಾಕೆ ಕೇಳನೀವಿನ್ನೂ ॥ ೪ ॥

ವಚನ ॥ ಇಂತೆಂದು ವಿಕ್ರಮರಾಯನ ಆಗದ್ದಾಗದು ಎಂದು ತನ್ನ ಮನಸ್ಸಿನಲಿ ಧೈರ್ಯವನ್ನು ತಂದುಕೊಂಡು ಇರುವ ಸಮಯದೊಳು ಶನಿರಾಜನು ಮಾಯಾವೇಷವನ್ನು ಧರಿಸಿ ಕಾರವಾನನ್ತಹಾಗೆ ಬಂದನದೆಂತೆನೆ

ಏಕತಾಳ ॥ ಶನಿರಾಜ ಬಂದಾನು ಉಜ್ಜಯಿನೀನಗರಿಗೆ ಘನವಾದ

Sri Vidyabharathi Book Centre, Sringeri

CC-O. In Public Domain. Digitized by eGangotri

ಅಶ್ವವನು ಕಲಿರಾಜ ತಾರೀ ॥ ೧ ॥ ಬೇಕಾದಬೇಪಾರಿ ಜನರೆಲ್ಲ ಕೂಡಲೂ ವಿಕ್ರಮರಾಜಾ ತಾನು ಅಲ್ಲಿಗೇ ಬರಲೂ ॥ ೨ ॥ ತುರಗಂಳ್ಕ ಯವನು ತಾನೂ ಕೇಳಾಲು ಆಗಾ ಸರಸದಿಂ ಶನಿರಾಜ ನುಡಿದಾನು ಬೇಗಾ ॥ ೩ ॥ ಸ್ವಾರಿಯುಮಾಡದೆ ತುರಗಾದಕಯು ಕೇಳೀ। ಸ್ವಂಬರುಪ್ರೋದುಂಟೆ ಮಹಾ ರಾಜ ದೊರೆಯೇ ॥೪॥

ವಚನ ॥ ಇಂತೆಂದು ಕಾರವಾನ ವೇಶದ ಶನಿದೇವರು ನುಡಿದ ಮಾತನ್ನು ವಿಕ್ರಮನು ರಾಜನು ಕೇಳಿ ತಕ್ಷಣ ಚಾಬೂಕ ಸ್ವಾರನನ್ನು ಸಾರಂಗ ಬಣ್ಣದ ಕುದುರೆ ಮೇಲೆ ಸ್ವಾರಿಯಂ ಮಾಡಿಸಲು ಉತ್ತಮವಾದ ಸ್ವಾರಿಗೆ ಮೆಚ್ಚಿ ಸಂತೋಷ ಪಟ್ಟು ಮತ್ತೇನೆನ್ನು ತಿರ್ದಾರದೆಂತೆನೆ,

ಜಂಪೆ ॥ ಅಬಲಕ್ ಘೋಡೆಕರ್ಯಾಗ್! ಮೋಲೋತುಂ ಅರ್ಬಸಾಬಾ ಅಬಹನುಹುಸ್ಕ । ದೇಖಾದೆಜಾಕಂ ॥ ೧ ॥ ಸಲಲೆ ಪ್ರೋ ಮಹರಾಜಾ । ಉಸ್ಕ ವಾಲ್ ಏಕ್ ಲಾಕ್ । ಹೊಯಿಂಗಾ ಸುನೋರಾಜಾ । ಸಹಬೋಲೆ ಅರ್ಬಸಾಬಾ ॥ ೨ ॥

ವಚನ ॥ ಇಂತೆಂದು ಕಾರವಾನ ವೇಷದ ಶನಿರಾಜನು ಹಿಂದೂಸ್ಥಾನಿ ಭಾಷೆಯಿಂದ ವಿಕ್ರಮರಾಜನೊಡನೆ ಅಶ್ವದ ಕ್ರಯವನ್ನು ಹೇಳಿ ನೀವೇ ಸವಾರಿ ಮಾಡಬೇಕೆಂದು ಹೇಳಲು ರಾಜನು ಹಾಗೇ ಆಗಲಿಯೆಂದು ಕುದುರೆಗೆ ಜೀನುಹಚ್ಚಿ ಸವಾರಿಮಾಡುತಿರ್ದಾರದೆಂತೆನೆ,

ತ್ರಿಪುಟ ॥ ಏನು ಹೇಳಲಿ ಶನಿಯಮಹಿಮೆಯು । ಘನಪರಾಕ್ರಮವುಳ್ಳ ಕುದುರೆಯು । ಮನಕೆ ಹರುಷವಾಗುವಂತೆ । ನಡೆಯುತಲಿರಲೂ ॥ ೧ ॥ ಅದರ ನಡಿಗೆಗೆ ಸಂತುಷ್ಟನಾಗಿ । ವಿಕ್ರಮನು ಉಲ್ಲಾಸಪಡುತಾ । ಮುಂದಿ ಪ್ರಾರ್ಬಲ ನೋಡುತ್ತಿದ್ದರು । ಕುದುರೆಚಂದಾ ॥ ೨ ॥ ಸುಖದ ಕೊನೆಯೊಳು ದುಃಖಯಿರ್ಬುದು । ದುಃಖದಮೊದಲೆ ಸುಖವು ಆಗೋದು । ಸುಖದುಃಖದ ನೆಲೆಯು ತಿಳಿಯದು, ಆರಿಗೂಯೆಂದೂ ॥ ೩ ॥

ವಚನ ॥ ಇಂತೆಂದು ಸಂತೋಷಭರಿತನಾದ ವಿಕ್ರಮರಾಜನ ಕೂಡೆ ಮಾಯಾವೇಶದ ಕಾರವಾನನು ಏನೆನ್ನುತಿರ್ದಾರದೆಂತೆನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಏಕತಾಳ ॥ ಏನಯ್ಯ ರಾಜೇಂದ್ರ । ಎನ್ನ ಅಶ್ವಾದ ಮಹಿಮೇ । ನಿವಿನ್ನಾಗೆ ಗೊತ್ತಿಲ್ಲಾ । ಹೇಳುವೆನೆಂದಾ ॥ ೧ ॥ ಒಂದುಪೆಟ್ಟನು ಹೊಡಿಯೇ । ಹಾರೋದು ಗಗನಕ್ಕೆ । ಇದರ ಸಾಮರ್ಥ್ಯವು ಹೀಗೆಂದು ಪೇಳೀ ॥ ೨ ॥

ವಚನ ॥ ಇಂತೆಂದು ವಿಕ್ರಮರಾಜನೊಡನೆ ಕಲಿಪುರುಷನಾದ ಕಾರವಾನನು ಹೇಳಲಾಗಿ ರಾಜನು ಕುದುರೆಗೆ ಒಂದು ಪೆಟ್ಟು ಹೊಡೆದನದೆಂತೆನೆ

ಜಂಪೆ ॥ ಕೊಡಪೆಟ್ಟನು ಬೀಳೆ । ದಾರಿ ಬಿಟ್ಟಯುಬಿಟ್ಟೆ । ಹಾರಿತೂ ಗಗನಕ್ಕೆ । ಆರಿಗೂ ಕಾಣದಂತೇ ॥ ೧ ॥ಘೋರಕಾನನಕಡೆಗೆ ! ಸಾರಿ ಹೊರೆಟಿತು ಕುದುರೆ । ವಿಾರಿಹೋಗೋದು ನೋಡೆ । ಹರಹರಯ ದೇ ॥ ೨ ॥ ವೀರವಿಕ್ರಮ ತಾನು । ಕೊರಡೆಯಿಂದಿಂನೊಂದನ್ನು ! ತುರಗಕೆ ಹೊಡೆಯಲೂ ! ಭೋರೆಂದು ನುಡಿಯಲೂ ॥ ೨ ॥

ವಚನ ॥ ಇಂತೆಂದು ಮಾಯದ ಅಶ್ವವು ಬಹುದೂರ ದೇಶವನ್ನು ಸೇರಿ ಮಹಾಗೊಂಡಾರಣ್ಯವನ್ನೂ ಮತ್ತು ನದಿಯನ್ನೂ ಕಂಡು ಆ ಕಡೆ ಕುದುರೆ ನಿಲ್ಲಲು ವಿಕ್ರಮರಾಜನು ಕೆಳಕ್ಕೆ ಇಳಿದು ತಕ್ಷಣ ಆದ ಆಶ್ಚರ್ಯವನ್ನು ಪೇಳುತಿದ್ದಾನದೆಂತೆನೆ.

ಯಾಲಪದ ॥ ವಿಕ್ರಮನೂ ಇಳಿದು ತಾನೂ । ಸುತ್ತಾ ಮುತ್ತಾ ತಿರುಗಿ ನೋಡೆ । ತೋರುತಿರುವಾ ಅಡವೀ ಇಲ್ಲಾವೊ ॥ ೧ ॥ ಇದುಯೇನು ಚೋದ್ಯಾವೆಂದು । ಹಿಂದೆ ತಿರುಗಿ ನೋಡುತ್ತಿರಲೂ ಕುದುರೆಯಿನ್ನೂ ಮಾಯವಾಯಿತೂ ॥ ಓ ಶಂಭುಲಿಂಗಾ ! ಇಂದಿನಾಶ್ಚರ್ಯವೇನೂಯಂದಾನೂ ॥ ೨ ॥ ನಿನ್ನಾ ಮಾಯಾ ನೀನೇ ಬಲ್ಲೆ । ದೀನನಾಥ ನೀನೇಯೆಂದ ಎನ್ನ ಕಾಯುವಭಾರ ನಿನ್ನಾದೇ ॥ ಓ ಶಂಭುಲಿಂಗಾ । ಮಾನಾಮುನಿ ಪೋಷಾ ನೀನೆಂದು ॥ ೩ ॥

ವಚನ ॥ ಇಂತೆಂದು ವಿಕ್ರಮರಾಜನು ಶಿವಶಂಭುಲಿಂಗನ ಸ್ತುತಿಯನ್ನು ಮಾಡಿ ವ್ಯಸನವನ್ನು ತಾಳಿ ಇರುವ ಸಮಯದಿ ಸೂರ್ಯನು ಪಶ್ಚಿಮಾಂಬುಧಿಗೆ ಇಳಿಯಲು ಕತ್ತಲೆ ಕವಿದು ರಾಜನು ಅಲ್ಲೇ ಪವಡಿಸಿ ರಾತ್ರಿಯನ್ನು ಕಳೆದು ಸೂರ್ಯೋದಯವಾಗಲೂ ರಾಜನು ಒಂದು ಪಟ್ಟಣದ ಮಾರ್ಗವನ್ನು ಹಿಡಿದು ಹೋಗುತಿರ್ದಾರದೆಂತೆನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ತ್ರಿಪುಡೆ॥ ಶೂರವಿಕ್ರಮ ಎದ್ದು ಹೊರಟನು ! ತಾವ ಲಿಂದಾ ನಾಮನಗರಿಗೇ ಬರುತದಾರಿಲಿ ಮೆಲ್ಲಮೆಲ್ಲನೆ । ವ್ಯಸನದಿಂದಾ ॥೧॥ ಹರಿಯ ಭಜನೆಯ ಮನದಿ ಜಪಿಸುತ । ಧೈರ್ಯವೆಂಬೋದು ಮನದಿತಾಳುತಾ । ಮರಿಯದೆ ಗುರು ಮಂತ್ರ ಜಪಿಸುತ । ರಾಯಬಂದಾ । ॥೨॥ ತಾಮುಲಿಂದೆಂಬೋ ಪಟ್ಟಣ ಕೆ ವಿಕ್ರಮ । ತಾವ ಪಿತಾ ಭಜನೆಮಾಡುತ । ಕ್ಷೇಮದಿಂದಲಿ ತಾನುಸೇರಿದ ನೇನು ದಿಂದಾ॥

ವಚನ ಇಂತೆಂದು ಇತ್ತಲೂ ಉಜ್ಜನಾ ಪುರದಲ್ಲ ಪುರಜನರು, ಪ್ರಧಾನರುಕ್ಷಿಮತ್ತು ಕಾರವಾರು ಮೂರು ನಾಲ್ಕು ಝಾವಗಳು ನೋಡಿ ರಾಯನು ಬಾರದಿರೆ ಕಾರವಾನನು ಪ್ರಧಾನಿಯ ಕೂಡೇ ಏನನ್ನುತಿರ್ದಾರದೆಂತೆನೆ

ಏಕತಾಳ॥ ಏನಯ್ಯಾ ಪ್ರಧಾನಿ। ನಿಮ್ಮಾ ದೊರೆಯು ಎಲ್ಲಿ ಹೋದಾನು ಕಾಣೆನೂ । ಎನ್ನುತಾ ಶನಿಯೂ ॥೧॥ ನಮ್ಮ ಕುದುರೆಯು ಎಲ್ಲಿ ನಿಮ್ಮ ದೊರೆಯು ಎಲ್ಲಿ। ನಮ್ಮ ಅಶ್ವವು ನಿಮ್ಮ ದೊರೆಯು। ಹೋದಾನೆಲ್ಲಿ ॥೨॥ ಜಾಗ್ರತೆಯಿಂದಾಗಲಿ। ನಮ್ಮ ತುರಗವು ಕೊಡೀ॥ ನಿಮಗೆ ತಡವ್ಯಾಕೆ। ಎಂದ ಸಾಹುಕಾರ॥ ॥೩॥

ವಚನ॥ ಇಂತೆಂದು ಕಾರವಾನನ ನುಡಿಯನ್ನು ಕೇಳಿ ಪ್ರಧಾನಿಯು ಚಿಂತಾಕ್ರಾಂತನಾತ ಮೂರು ನಾಲ್ಕು ಹರದಾರಿ ಪರಿಯಂತರಕ್ಕೂ ಚಾರರನ್ನು ಅಟ್ಟಲು ದೊರೆಯುಲಿ ಕಾಣದೆ ಇರಲು ಮಹಾ ವ್ಯಸನಾಂಬುದಿಯಲ್ಲಿ ಮುಳುಗಿ ಕಾರವಾನನಿಗೆ ಪ್ರಧಾನಿಯು ನಿಮ್ಮ ಕುದುರೆ ಖರೀದಿ ಏನೆಂದು ಕೇಳಲು ನಮ್ಮ ಕುದುರೆ ಖರೀದಿ ಲಕ್ಷ ರೂಪಾಯಿ ಎಂದು ಕಾರವಾನನು ಹೇಳಲು ಪ್ರಧಾನಿಯು ಕಾರವಾನನಿಗೆ ಖರೀದಿ ಪಾವತಿ ಮಾಡುತಿರ್ದಾರದೆಂತೆನೆ.

ಜಂತೆ। ಭಂಡಾರವನು ತೆಗೆದೂ। ಕೊಡುವ್ರೋನು ಕ್ರಯವನ್ನು । ಸಡಗರದಿ ಕಲಿರಾಜ। ದ್ರವ್ಯಕೈಗೊಂಡೂ ॥೧॥ ನಡೆದಾನು ತಾನಾಗ। ಆದರೇನಾಶ್ಚರ್ಯ । ಬಿತದೆ ಬಂತೂ ಕಷ್ಟ। ನಗರದಾಜನರಾ ॥೨॥ ದೇಶದೇಶವೂ ಹುಡುಕಿ ಘಾಸಪಟ್ಟರು ಅಲ್ಲಿ । ಮೋಸ ಬಂತೂ ಇಲ್ಲೀ ಶಿವನೇ ಸಲಹಲೀ ॥

ವಚನ ॥ ಇಂತೆಂದು ಉಜ್ಜನಪುರದ ಮಂದಿ ಮಾರ್ಬಲಕ್ಕೆಲ್ಲಾ

Sri Vidyabharathi Book Centre, Sringeri

CC-O. In Public Domain. Digitized by eGangotri

ವ್ಯಸನ ಪ್ರಾಪ್ತಿಯಾಗಲು ಇತ್ತಲಾ ವಿಕ್ರಮರಾಯನು ತಾಮಲಿಂಬಾಪುರಕೆ ಸೇರಿದನದಂತೆನೆ.

ದ್ವಿಪದೆ ॥ ರಾಮರಾಮಾ ಯೆಂದೂ । ರಾಜ ತಾ ಬಂದೂ ತಾಮ ಲಿಂದಾಪುರದಾ ಬೀದಿಯಲಿನಿಂದೂ ॥ ೧ ॥ ಪ್ರೇಮದಿಂದಾ ಎಲ್ಲಾ ಪುರದಜನ ಕಂಡೂ । ಕಾಮರೂಪದ ಪುರುಷಾ ಇವನ್ಯಾರು ಎಂದೂ ॥ ೨ ॥ ಎಲ್ಲನರೂ ಕಂಡು । ಆಶ್ಚರ್ಯಪಟ್ಟು ಲಲಿತವಿಕ್ರಮ ತಾನು ಮುಂದಕ್ಕೆ ಹೊರಟೂ ॥ ೩ ॥ ಭಾರಿ ವರ್ತಕನೊಬ್ಬ ವೈಶ್ಯನೆಂಬುವನೂ ಬರುವಂಥ ವಿಕ್ರಮನ ದೂರ ದಲಿ ಕಂಡೂ ॥ ೪ ॥ ಮೆಲ್ಲಮೆಲ್ಲನೆರಾಯ ವರ್ತಕನಬಳಿಬಂದೂ ಮೆಲ್ಲನೆ ಅಂಗಡಿಯಲಿ । ತಾಕುಂತೂ । ೫ ॥ ಬಂದು ಕುಂತಾಕ್ಷಣಕೆ। ಸಂಧಿಸಿತು ವರ್ತಕನಿಗೆ ಒಂದುಕ್ಷಣ ಬಿಡುವಿಲ್ಲದಹಾಂಗೆ ॥೬॥ ಯಾವಾಗ್ಯೂ ಇಲ್ಲದ। ವ್ಯಾಪಾರವಾಗೆ । ಇವನ್ಯಾರೋ ಮಹಾಪುರುಷ । ಎಂದು ತಾ ತಿಳಿಯೇ ॥೭॥

ವಚನ ॥ ಇಂತೆಂದು ವರ್ತಕನು ವಿಕ್ರಮರಾಜನ ರೂಪಲಾವಣ್ಯವಂ ನೋಡಿ ಇವರು ಮಹಾಪುರುಷರೆಂದು ತಿಳಿದು ಮಾತನಾಡಿಸುತಿರ್ದಾರ ದೆಂತೆನೆ.

ಏಕತಾಳ ॥ ನೀವ್ಯಾರು ಹೇಳಿರೈ । ಎಲ್ಲಿಂದ ಬಂದಿರೈ । ಯಾವ ದೇಶವು ನಿಮ್ಮದು । ಕಾರ್ಯವೇನುಂಟೂ ॥ ೧ ॥ ಯಾವಕುಲವು ತಮ್ಮದು ॥ ಎಲ್ಲಿಗೆ ಹೋಗೋದು । ಎಸ್ನೂತ ಕೇಳಾಲು ವಿಕ್ರಮನನ್ನೂ ॥ ೨ ॥

ವಚನ ॥ ಇಂತೆಂದು ವರ್ತಕನು ರಾಯನಿಗೆ ಕೇಳಲಾಗಿ ರಾಯನು ಏನೆಂದು ಹೇಳುತಿರ್ದಾರದೆಂತೆನೆ.

ಜಂಪೆ ॥ ನಮ್ಮ ದೇಶವು ದೂರಾ । ನಮ್ಮ ಕುಲದ ವಿವರಾ । ಸನ್ಮತದಿ ಪೇಳುವೆನು । ಕೇಳಯ್ಯಾ ಈಗಾ ॥ ೨ ॥ ಕ್ಷತ್ರಿಯ ಕುಲವು ನಮ್ಮಾಗು । ಈ ತಕ್ಷಣಾವು ಇದ್ದು । ಮತ್ತೆ ಮುಂದಕೆ ನಾವು । ಹೋಗೂವೆವೆಂದೂ ॥ ೨ ॥

ವಚನ ॥ ಇಂತೆಂದು ಮತ್ತೆ ವೈಶ್ಯನು ನಿಮ್ಮ ಕುಲಗೋತ್ರಗಳನು ಸತ್ಯವಾಗಿ ಹೇಳಬೇಕೆಂದು ಕೇಳಲು ರಾಜನು ಸತ್ಯವಾಗಿ ನಾವು ಕ್ಷತ್ರಿ ಯರು ಎಂದು ಹೇಳಲಾಗಿ ವೈಶ್ಯನು ಸಂತೋಷಪಟ್ಟು ಏನೆನ್ನುತಿರ್ದಾರ ದೆಂತೆನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ತ್ರಿವುಡೆ ॥ ಕಡುರುಚಿಯ ಪಕ್ವಾನ್ನ ಮಾಡಿಸೆ । ಕಡು ಮಮತೆಯೊಳ್ ವೈಶ್ಯನು॥ ಅಡಿಗೆಯಾಗಿದೆ ಏಳಿಯೆಂದನು ॥ ರಾಯನನ್ನೂ ॥ ೧ ॥ ಸ್ನಾನ ವಾಗಲಿ ನಿಮಗೆ ಎನ್ನುತ ।ಮನ್ನಿಸೀ ವಿಕ್ರಮನಿಗೆ ಪೇಳಿದಾ। ಇನ್ನೂ ಭೋಜನ ವಾದಮೇಲೆ । ಹೋಗಬಹುದೆಂದಾ ॥ ೨ ॥

ವಚನ ॥ ಇಂತೆಂದು ವಿಕ್ರಮನಿಗೆ ವೈಶ್ಯನು ಮನ್ನಿಸಿ ಸ್ನಾನಸಂಧ್ಯಾದಿ ಗಳಿಂದ ಭೋಜನವನ್ನು ಮಾಡಿಸಿ ಸಂತೋಷಪಡಿಸಿ ವೈಶ್ಯನು ಅನಂತರದಲ್ಲಿ ಆಲೋಚಿಸಿ ತನ್ನ ಕುಮಾರ್ತೆಯಾದ ಆಲೋಲಿಕಗೆ ಏನೆನ್ನುತಿರ್ದಾರ ದೆಂತೆನೆ.

ಏಕತಾಳ ॥ ಬಾಲಶಿರೋಮಣಿಯೆ । ನಿಜಮುತ್ತಿನಮಣಿಯೆ । ಲೋಲ ಪುರುಷನೂ ಇವನು । ನೋಡಮ್ಮ ತಾಯೇ ॥ ೧ ॥ ಚೌಷಷ್ಠಿ ವಿದ್ಯದೊಳ್ ಸಂಪನ್ನನಿವನೂ । ಬತ್ತೀಸಕಳೆಯುಳ್ಳ ಪುರುಷ ನೋಡಿನ್ನೂ ॥ ೨ ॥ಇವನಿಗೆ ಮಾಲೆಯ ಹಾಕಮ್ಮ ನೀಯಿನ್ನೂ । ಸರ್ವಸಿದ್ಧಿಯುಳ್ಳ ಮಹಾತ್ಮನು ಇವನೂ ॥೩॥ ನಿನ್ನ ಭಾಗ್ಯಕೆಯೆಣೇ । ಗುಣಮಣಿ ಇಲ್ಲಾವು ನೀನು ಇವನ ಮದುವೆಯಾಗಮ್ಮಾ ॥ ೪ ॥

ವಚನ ॥ ಇಂತೆಂದು ಆಲೋ ಕೆ ಕೂಡೆ ವರ್ತಕನು ಹೇಳಲು ಆಲೋಲಿಕೆ ರಾತ್ರಿಗೆ ಎನ್ನ ಗೃಹಕ್ಕೆ ಕಳುಹಿಸಿದರೆ ಅವನ ಗುಣಶೀಲಗಳನು ನೋಡಿ ಮಾಲೆಯ ಹಾಕುವೆನೆಂದು ಹೇಳಲು ವೈಶ್ಯನು ಹಾಗೆಯೇ ಆಗಲಿ ಎಂದು ವಿಕ್ರಮರಾಜನ ಕೂಡೆ ಹೇಳುತಿರ್ದಾರದೆಂತೆನೆ,

ತ್ರಿವುಡೆ ॥ ದಿನಕಗಲು ಕಳೆದು। ಸಂಜೆಯಾಗೆತಿಳಿದೂ । ವೈಶ್ಯರಾಯಗೆ ಸುಂದರಾತ್ಮಕರಾದ ಕ್ಷತ್ರಿಯರಿಕೆಹೋಗಿ ಮನೆಗೇ ॥ ೧ । ಚಿತ್ರರಚನೆಯುಳ್ಳ। ಮನೆಯೊಳು । ಸಂತುಷ್ಟರಾಗಿ ನಿದ್ರೈಗೈಯ್ಯಲೂ । ಸತ್ಯಶೀಲರ ಸುಖವು । ಆಗೋದುಹೋಗಿ ನೀವೂ ॥ ೧ ॥ ಎಂದು ವೈಶ್ಯನು ಹೇಳಿಕಳುಹಲು ಸಂದೇಹ ವಿಲ್ಲದೆ ಬಂದರಾಯನು । ಅಂದಮಾದರಂಗುಮಹಾಲಿನ ಬಳಿ । ಬಂದುನಿಂದೂ ॥ ೩॥ ಚಿತ್ರರಚನೆಯೊಳುಳ್ಳ ಮಹಲನು ।ಕಂಡು ಆಶ್ಚರ್ಯಪಟ್ಟ ತಾನೂ ಕಂತು ಪಿತನ ಭಜನೆಮಾ ತ । ಬಂದ ಇನ್ನೂ ॥ ೪ ॥ ಏನುಕುಶಲವೋಚಿತ್ರಗಾಶನ

Sri Vidyabharathi Book Centre, Sringeri

CC-O. In Public Domain. Digitized by eGangotri

ನಾನಾ ಮೃಗಗಳ ಹಂಸಕೋಗಿಲ | ಅನುಮಾನವಿಲ್ಲದ ಆನೆ ಕುದುರೆ ಮಂದಿ ಮಾರ್ಬಲಾ ॥ ೫ ॥ಎಲ್ಲರಚನೆಯು ಚಿತ್ರದೊಳು ಕಂಡು| ಮೆಲ್ಲನೆ ಮಂದಕ್ಕೆ ನಡಿಯಲೂ | ಅಲ್ಲಿಯಿರುವಾ ಹಂಸತೂಲಿಕಾ ಮಂಚವನು ಕಂಡು॥ ೬॥ ರತ್ನ ಖಚಿತವಾದ ಮಂಚವು ಎತ್ತನೋಡಲು ಮುತ್ತು ಗೊಂಚಲು ಮುತ್ತು ಲೇಪು ಹೊದಿಕೆಕಂಡನು ರಾಯತಾನೂ ॥ ೭ ॥ ನಾಲ್ಕು ಕಡೆಗೆ ನಾಲ್ಕುದೀಪ ಸ್ತಂಭ ವುರಿಯೋದು ತಾ ಕಂಡನೂ ಲೆಕ್ಕವಿಲ್ಲದ ಚಿತ್ರರಚನೆಯೊಳ್ ಶೋಭಿಪುದೂ ॥ ೮ | ಅದನೆ ನೋಡುತ ಬೆರಗಾದನೂ॥ ೯ ॥ ಕಲಿಪುರುಷನಮಹಿಮೆಯನ್ನು ತಿಳಿಯಲಾರದಾದನು ವಿಕ್ರಮರಾಯನು॥ ೯ ॥ ಆಗದ್ದಾಗದ ಅರಿಗಾದರು | ಆಗಿಹೋಗಲಿಯೆಂದುರಾಯನೂ ಸೊಗಸಿನಿಂದಲಿ ಮಂಚ ಏರಿದ | ಶ್ರೀರಾಮಾಯೆಂದೂ ॥ ೧೦ ॥

ವಚನ ॥ ಇಂತೆಂದು ರಾಯರು ಆಶ್ಚರ್ಯಪಟ್ಟು ಮಂಚದಮೇಲೆ ಪವಡಿಸಲು ಇತ್ತ ಆಲೋಲಿಕೆ ಶೃಂಗಾರವಾಗಿ ರಂಗುಮಹಲಿಗೆ ಬರುತಿರ್ದಾಳದೆಂತೆನೆ.

ಏಕತಾಳ ॥ ಅರ್ಧರೇಖು ॥ ಉಟ್ಟಾಳು ಪೈಟಾಣಿ ಶೀರೆಯು ತಾನೂ ತೊಟ್ಟಾಳು ಜರತಾರಿ ಕುಪ್ಪಸವನೂ | ೧ | ಇಟ್ಟಾಳು ಕುಂಕೂಮ ಕಾಟೀಕೆಯನ್ನೂ | ಕಾಲಲಿ ಪೈಂಜಾಣೆ ಲೀಲೆಯಿಟ್ಟು ॥ ೨ | ನವರತ್ನ ಮಾಲೆಗಳ್ ತೆಕೊರಳಲ್ಲಿ ಇಟ್ಟು ಸೊಗಸಾಗಿ ಮುತ್ತಿನ | ಕಂಠೀಯುತೊಟ್ಟು | ೩ ಬತ್ತೀಸ ಲಕ್ಷಣ | ಅವಳೀಗವುಂಟೂ | ಮತಿವಂತೆ ಬಾಲೆಯು ಶೃಂಗರದೀ ಹೊರಟೂ ॥ ೪ |

ವಚನ | ಇಂತೆಂದು ವೈಶ್ಯನ ಮಗಳಾದ ಆಲೋಲಿಕೆ ತಾನ್ ಶೃಂಗಾರವನ್ನು ಮಾಡಿಕೊಂಡು ಬಂಗಾರದ ತಟ್ಟೆಯಲ್ಲಿ ಕರ್ಪೂರವೀಳ್ಯೆಯುವಂ ಇರಿಸಿಕೊಂಡು ಸರ್ವಸಾಹಿತ್ಯದಿಂದ ಅಲಂಕಾರಯುಕ್ತಳಾಗಿ ರಂಗುಮಹಲಿಗೆ ಪೊಕ್ಕಳದೆಂತೆನೆ.

ಜಂಪೆ ಆಲೋಲಿಕೆ ತಾನೂ [illegible] ಕಂಡಾಳು ವಿಕ್ರಮಗೇ | ೧ | ಮಲಗಿದ್ದ ರಾಜನಾ | ಎಚ್ಚರಿಸೊದ್ಧ್ಯಾಂಗೇ | ಲೋಲೆಯ ಮನದಿ | ಚಿಂತೆಯು ತಾಳೇ | ೨ |

Sri Vidyabharathi Book Centre, Sringeri

CC-O. In Public Domain. Digitized by eGangotri

ವಚನ | ಇಂತೆಂದು ಆಲೋಲಿಕೆಯು ಮನದಲ್ಲಿ ಆಲೋಚಿಸಿ ರಾಗ ರಚನೆಯಿಂದ ಎಚ್ಚರವನ್ನು ಪಡಿಸುವೆನೆಂದು ವೀಣೆಯಂ ಕೈಕೊಂಡು ನುಡಿಸಿ ಪಾಡುತಿರ್ದಾಳದೆಂತೆನೆ,

ಜಾವಡಿರಾಗ | ಮಲಗಿ ನಿದ್ರೆಯು | ಮಂಡೆ ದೊರೆಯೇ ಲಲಿತಾಸ್ತ್ರೀ ನೀನೇಸರಿಯೇ | ಕಲಿಯುಗದಿ ನೀನೇ ಅತಿಚೆಲ್ವನೆಂದಳೂ |೧| ಏಳು ರಮಣ ಮುಖವತೋರು | ಬಾಲಾನಿದ್ರೆಬಿಡೋ | ಥ ಥಳನೆ ಹೊಳೆಯುವಂಥ ನನ್ನ ರೂಪು ನೋಡೋ ||೨||

ವಚನ|| ಇಂತೆಂದು ಆಲೋಲಿಕಾ ತನ್ನ ರಾಗ ರಚನೆಯಿಂದಲೂ ಪನ್ನೀರಿನಿಂದಲೂ ರಾಯನಿಗೆ ಎಚ್ಚರಿಸಿದರೂ ಎಚ್ಚರವು ಆಗದಿರಲು ಮನದಲ್ಲಿನೊಂದು ತನ್ನ ಸಕಲ ಆಭರಣಗಳನ್ನು ತೆಗೆದು ಮುತ್ತಿನ ಹಾರವನ್ನು ಗೂಟಕ್ಕೆತಗುಲಿಸಿ ವಿಕ್ರಮನ ಬಾಜುಯಲ್ಲೆ ತಾನೂ ಪವಳಿಸಿ ನಿದ್ರೆಯಂಗೈಯಲು ರಾಜನು ಎಚ್ಚರಪಟ್ಟು ನೋಡುತ್ತಿರ್ದಾರದೆಂತೆನೆ.

ಏಕತಾಳ || ವಿಕ್ರಮರಾಯ ತಾನೂ | ಕಣ್ತೆರೆದುನೋಡುತ್ತಿರಲೂ ಲೋಕದೊಳಿಲ್ಲದ || ಆಶ್ಚರ್ಯವಾಯಿತೂ ||೧|| ಚಿತ್ರದಹಂಸಾವು ಹಾರಿ ಬಂದು ತಾನು ಮುತ್ತಿನಸರದ ಗೂಟಕ್ಕೆ ಬಂದೂ ||೨|| ಒಂದೊಂದು ಮುತ್ತನು ನುಂಗುತ ಹಂಸಾವೂ ಇದು ಎಲ್ಲಾ ಆಶ್ಚರ್ಯ ರಾಯಕಂಡಾನೂ ||೩|| ಹರಹರಾ ಎನ್ನುತಾ ಹರನಭಜಿಸೆರಾಯಾ ಹಾರವಲ್ಲವನುಂಗಿ ಹಾರಿತೂಹಂಸಾ ||೪||

ವಚನ || ಇಂತೆಂದು ವಿಕ್ರಮರಾಯನು ವಿಪರೀತವಾದ ಆಶ್ಚರ್ಯವನ್ನು ಕಂಡು ಅದು ಕಲಿಪುರುಷನ ಮಹಿಮೆಯೆಂದು ಆಲೋಚಿಸಿ ಆಗದ್ದಾಗದು ಎಂದು ಮನಸಿನಲ್ಲಿ ಧೈರ್ಯವನ್ನು ತಂದುಕೊಂಡು ಮಲಗಿ ನಿದ್ರೆಗೈವ ಸಮಯದಿ ಮುಂಗೋಳಿ ಕೂಗಿತದೆಂತೆನೆ;

ಜಂಪೆ|| ಕೂಗಿದವು ಕೋಳಿಗಳೇ| ಕಾಗೆ ಕೋಗಿಲೆ ಕೂಗೆ| ಸೊಗಸಾಗಿ ಎಲ್ಲರೂ ಎದ್ದರೂ| ಎದ್ದರೂ ಕೇಳೇ ||೧|| ವೈಶ್ಯನ ಮಗಳಾದ | ಆಲೋಲಿಕೆಗೆ ನಿದ್ರೆಯಾಗಾ| ಹಂಸಮುಖಿಗೆ ಎಚ್ಚರಿಕೆ ಆಯಿತೂ ಆವಾಗ ||೨|| ಎದ್ದುನಿಂತಳುಬಾಲೆ| ಮುತ್ತಿನಹಾರವನ್ನು ನೋಡೆ ಕದ್ದಾನು ಇವನೆಂದು || ಕೋಪವು ತಾಳೇ ||೩||

Sri Vidyabharathi Book Centre, Sringeri

CC-O. In Public Domain. Digitized by eGangotri

ವಚನ॥ ಇಂತೆಂದು ಆಲೋಲಿಕೆ ವಿಕ್ರಮನನ್ನು ಕಂಡು ಬಹಳ ಮಾಯಕಾರನು, ತಸ್ಕರನು ಎಂದು ಗದ್ದರಿಸಿ ಏಳೆಂದು ತಟ್ಟಲು ಕೃಷ್ಣ ರಾಯನು ಎದ್ದನು ಆಲೋಲಿಕೆ ರಾಜನಿಗೆ ಏನೆನ್ನುತಿರ್ದಾಳದೆಂತೆನೆ.

ತ್ರಿಪುಡೆ॥ ಅಹುದಹುದೆದ್ದೇಳೋ ಕಳ್ಳನೆ! ನಿನ್ನ ಮಾಯನಿದ್ರೆ ಬಿಟ್ಟೇಳೊ ಬಹುಮರುಳನಾಗಿ ನೀನಾದೆ| ಹುಚ್ಚನು ಛೀ, ಮೂರ್ಖ ಕೊಡೂ '೧| ನನ್ನ ಮುತ್ತಿನ ಹಾರ ಕೊಡು ನೀನು | ಬುದ್ಧಿಹೀನ ಕೇಳು ಇನ್ನು | ನಿನಗೆ ದಕ್ಕಲಾರದು ಕಳ್ಳಾ| ಕೊಡುಯೆಂದೂ ||೨||

ವಚನ॥ ಇಂತೆಂದು ವಿಕ್ರಮರಾಜನಿಗೆ ನಾನಾತರದಿಂದ ದುರ್ಭಾಷೆ ಮಾತುಗಳಾಡಿ ಆಲೋಲಿಕೆ ಮುತ್ತಿನಹಾರವನ್ನು ಕೊಡು ಎನಲು. ವಿಕ್ರಮನು ನಾನು ಕಾಣೆನೆಂದು ಹೇಳಲು ಬಾಲೆಯು ಕೃಷ್ಣಾ ತನ್ನ ತಂದೆಯ ಬಳಿಗೆಹೋಗಿ ಏನೆಂದು ಪೇಳುತಿರ್ದಾಳದೆಂತೆನೆ.

ಏಕತಾಳ॥ ತಂದೆ ನೀನು ಒಳ್ಳೆವರನ ತಂದೆ ಕೇಳೂ | ಮುಗ್ಧನು ಅವನೀಗ | ಕಳ್ಳಾ ಕೇಳಿನ್ನೂ ॥ ೧ | ಅಬದ್ಧಾವಲ್ಲವು ಕೇಳೂ | ಸುಂದರಮುತ್ತಿನಾ ಹಾರವು | ಕದ್ದು ತಾಕೊಡದೆ| ಇರುವ್ನೋನೂ | ೨ | ಎಷ್ಟು ಕೇಳಾಲು ಅವನು ನಾಕಾಣೆನೆಂಬೋನು ಭ್ರಷ್ಟನು ಅವನಯ್ಯಾ | ತಂದೆ ಕೇಳಿನ್ನೂ | ೩ |

ವಚನ | ಇಂತೆಂದು ಆಲೋಲಿಕೆ ತನ್ನ ತಂದೆಯಕೂಡೆ | ಹೇಳಲು ವೈಶ್ಯನು ವಿಕ್ರಮನಿಗೆ ದಂಡಿಸಿ ಏನೆಂದು ಕೇಳುತಿರ್ದಾನದೆಂತೆನೆ.

ಜಂಪೆ | ಏನಯ್ಯ ದೇಶಿಕನೇ | ನಿನಗೆ ಉಪಕಾರಮಾಡೇ | ಎನಗೆ ಮೋಸವು ನೀನು ಮಾಡಲುಬಹುದೆ || ೧ || ಮೃಷ್ಟಾನ್ನ ಭೋಜನಾ ಇಷ್ಟಿಯಿಂದಲಿ ಅನ್ನಾ | ಇಟ್ಟುದಕೆ ಫಲವೇನು | ಹೇಳಯ್ಯ ಇನ್ನೂ | ೨ | ನನ್ನ ಪುತ್ರಿಯು ನಿಮಗೀ | ಮನಹರುಷದಿ ಕೊಡೇ | ಹೀನಗುಣದಿಂದೀಗ | ಕಳ್ಳತನಮಾಡೇ | ೩| ಆಗಬಹುದೇ ನಿನಗೆ | ಸೊಗಸಾಗಿ ಇದ್ದೀತೆ ಈ ಮುತ್ತಿನ ಹಾರ ಕೊಟ್ಟು ನೀ ಹೋಗೀ | ೪ |

ವಚನ | ಇಂತೆಂದು ವೈಶ್ಯನು ದಂಡಿಸಿ ಕೇಳೆ ವಿಕ್ರಮನು ಸರ್ವಥಾ

Sri Vidyabharathi Book Centre, Sringeri

CC-O. In Public Domain. Digitized by eGangotri

ನಾನು ಮುತ್ತಿನಹಾರವನ್ನು ತೆಗೆದುಕೊಂಡವನಲ್ಲವೆಂದು ಹೇಳಲು ವೈಶ್ಯನ ಕೋಪವನ್ನು ತಾಳಿ ರಾಜನಿಗೆ ಹಿಂಸಕರವಾದ ಬಂಧನವನ್ನು ಮಾಡುತಿರ್ದಾನದೆಂತೆನೆ,

ಜಂಪೆ ॥ ಏನೂ ಖೂಳಾ । ನಿನಗೆ ನಾನೆಷ್ಟು ವಿಧದಲ್ಲಿ ಕೇಳೆ ನಿನ್ನಲ್ಲಿ ಮೋಸವು ಬಹಳವಾಗಿದೇ ॥ ೧ ॥ ಎನ್ನುತಾ ತನ್ನಯ ಆಳುಗಳಿಗೆ ಆಗಾ । ತಾನಪ್ಪಣೆಕೊಟ್ಟ । ಕಟ್ಟೆಂದು ಆಗ । ೨ । ಭಾರಿಕಳ್ಳನು ಇವನು ॥ ಬಂಧಿಸಿದ ಹೊತ್ತುಕೊಡನೂ । ಭಾರೀ ಕೊರಡೆಗಳಿಂದ । ಬೊಡಿಯಿರಿ ಇನ್ನೂ । ನಿರ್ದಯವುಳ್ಳ ।ಆಳುಆ ಕ್ಷಣಪೇಳಲಾಗಾ ಕಟ್ಟಿ ಮುಷ್ಟಿಗಳಿಂದ ಬೊಡಿಯೋರು ಬೇಗಾ । ೪ ।

ವಚನ । ಇಂತೆಂದು ವಿಕ್ರಮನಿಗೆ ನಾನಾಪರಿ ಹಿಂಸೆಯಿಂದ ರಕ್ತಮಯವಾಗುವ ಹಾಗೆ ಬೊಡಿಯಲು ಆಲ್ಲಿಗೂ ನಾನೂ ಮುತ್ತಿನಹಾರವನ್ನು ಕಾಣೆನೆಂದು ಹೇಳಲು. ಇವನು ಭಾರೀ ತಸ್ಕರನು ನಮಗೆ ಕೊಡುವವನಲ್ಲವೆಂದು ವೈಶ್ಯನು ಚಂದ್ರಶಯನರಾಜನೊಡನೆ ಹೇಳಲು ತಕ್ಷಣ ರಾಯನು ದೂತರಿಗೆ ಕಳುಹಿಸಿಕೊಟ್ಟನದೆಂತೆನೆ.

ಏಕತಾಳ ॥ ದೂತಾರುಬಂದರು । ಭೀತಿಯುಪಡಿಸುತಾ॥ ೧ ॥ ಖ್ಯಾತಿಯ ಮಾಡುತ ॥ ಕೊಲ್ಲುತಾ ಇರುತಾ ॥ ೧ ॥ ನಾನಾಬಗೆಯ ಹಿಂಸೆ । ಕೊಡುತ ದೂತಾರೆಲ್ಲಾ ॥ ಹೀನನೀನಡಿಯೆಂದು ॥ ಬಾಧೆಪಡಿಸುತಾ ॥ ೨ ॥

ವಚನ । ಇಂತೆಂದು ದೂತರು ವಿಕ್ರಮನಿಗೆ ನಾನಾಬಗೆ ಹಿಂಸೆಯನ್ನು ಕೊಟ್ಟು ಚಂದ್ರಶಯನರಾಜನ ಬಳಿಗೆ ಎಳೆದೊಯ್ಯಲು ಚಂದ್ರಶಯನನು ವಿಕ್ರಮನಿಗೆ ಏನೆಂದು ಕೇಳುತಿರ್ದಾನದೆಂತೆನೆ

ತ್ರಿಪುಡೆ ॥ ಚಂದ್ರಶಯನನು ಕೇಳಿದಾನು ದಾರಿಕಾರಾ ನಿನ್ನಲ್ಲಿ ಮುತ್ತಿನಹಾರವಿದೆಯಂತೆ ಕೊಡುಸಾಹುಕಾರ್ಗೇ ॥ ೧ ॥ ನೀನು ಕೊಡದೆ ಮೋಸಮಾಡಲು । ಪ್ರಾಣಹಿಂಸೆಕೊಡುವೆ ಕೇಳಿನ್ನೂ । ನೀನು ಸುಮ್ಮ ಘಾಸಿಪಡುವೆಯೋ । ಕೊಡು ನೀನೂ ॥ ೨ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ವಚನ । ಇಂತೆಂದು ಚಂದ್ರಶಯನರಾಜನ ನುಡಿಯನ್ನು ಕೇಳಿ ವಿಕ್ರಮ ರಾಯನ. ಏನೆನ್ನುತಿರ್ದಾರೆಂದಡೆಂತೆನೆ.

ಯಾಲಪದ ॥ ಚಂದ್ರಾಶಯನಾ ರಾಜಾ ಕೇಳೂ । ಮುತ್ತಿನಾಹಾರವು ನನ್ನಲ್ಲಿಲ್ಲ ಕೇಳನೀವಿನ್ನೂ ॥ ಓ ಚಂದ್ರಶಯನಾ । ಬಂಧವ್ಯಾಕೆ ಕೊಡುತೀ ರೆಂದಾನೂ ॥ ೧ ॥ ಸುಳ್ಳುಯಂದಿಗೂ ಆಡಲಾರೆ । ಕೇಳು ರಾಜಾ ಯಂದೇ ಹೇಳಿದಾರೆ ಸುಳು ಆಗುತಿದೇ । ಚಂದ್ರಶಯನಾ । ಅಳಕವಲ್ಲಾ ಕೇಳಿ ನೀವಿನ್ನೂ ॥ ೨ ॥ ಮುತ್ತಿನಹಾರದವಿವರಾ । ನಿಜಸ್ಥಿತಿ ಪೇಳಿದಾರೆ ವೃಥಾವೆಂದೂ ತಿಳಿದುಕೊಳ್ಳೀರೂ ॥ ಓ ಚಂದ್ರಶಯನಾ । ಮುತ್ತಿನ ಹಾರಾ ನಾನೂ ಕಾಣೇನೂ ॥ ೩ ॥ ಗ್ರಹ ನಮಗೇ ಅನುಕೂಲವಿಲ್ಲಾ ಮಹಾರಾಜಾ ಕೇಳುಯೆಲ್ಲಾ । ಬಹುದೂರು ಬಂದಿತು ಕೇಳ್ಳಯ್ಯಾ । ಓ ಚಂದ್ರಶಯನಾ ॥ಅದುದಾಗೋದಾಯಿತುಕೇಳೆಂದಾ । ೪ ॥ ನಾನೂಕಳ್ಳಾ ತನಾವನ್ನೂ। ಮಾಡೋನಲ್ಲಾ ಕೇಳಿಯಿನ್ನೂ । ಇನ್ನು ನಾನು ಮಾಡೀ ಇದ್ದಾರೂ ॥ ಓ ಚಂದ್ರಶಯನಾ । ಮನ್ನಿಸೋದು ಎಂದೂ ನುಡಿಯಾಲೂ ॥ ೫ ॥

ವಚನ ॥ ಇಂತೆಂದು ವಿಕ್ರಮನು ನುಡಿದಮಾತಿಗೆ ಚಂದ್ರಶಯನನು ಮಹಾಕೋಪದಿಂದ ಘರ್ಜಿಸಿ ಏನೆಂದು ಹೇಳುತಿರ್ದಾರೆಂದೊಡೆಂತೆನೇ.

ಜಂಪೆ । ಶಿಡಿಲುಘರ್ಜನೆಯಂತೆ । ಖಡಿಯಿಡುತಚಂದ್ರಶಯನ । ಕಡಿದು ಹಾಕಿರಿ ಇವನ ಕೈಕಾಲುಗಳನೂ। ೧ । ಎಂದುಚರರಿಗೆಹೇಳಿನಿಂದೂ ಕೋಪವು ಊರುಹೊರಗೆ ತಾಳಿ ॥ ಇದು ಇವನ ಕೈಕಾಲೂಖಂಡ್ರಿಸಿರೀ ॥ ೨ ॥ ಹಾಕಿ ಅನ್ನನೀರುಕೊಡದಿರೀ । ಸಾರಿನುಡಿದನು ತಾನು ಇಂಥ ಅವಿವೇಕಿ

ಶ್ಲೋ ॥ ರಾಜಾರಾಕ್ಷಸರೂಪಂಚ । ಪಧಾನಂವ್ಯಾಘ್ರರೂಪಯೊಂ
ಪರಿವಾರಂಶ್ವಾನರೂಪಂ । ಯಥಾರಂಜಾತಥಾಪ್ರಜಾ ॥ ೫ ॥

ವಚನ ॥ ಇಂತೆಂದು ಶ್ಲೋಕಾರ್ಥಕ್ಕೆ ಸರಿಯಾಗಿ ಚಂದ್ರಶಯನನು ವಿಚಾರಣೆಯನ್ನು ಸರಿಯಾಗಿ ಮಾಡದೇ ಅವಿವೇಕತನದಿಂದ ವಿಕ್ರಮನು ಕೈಕಾಲುಗಳನ್ನು ಕಡಿಯಿರೆಂದು ಹೇಳಲು ಚರರು ತಕ್ಷಣ ಎದ್ದು ವಿಕ್ರಮ ನನ್ನು ಹಿಡಿದುಕೊಂಡು ಊರಹೊರಗೆ ಹೋದರೆಂತೇ.

Sri Vidyabharathi Book Centre, Sringeri

CC-O. In Public Domain. Digitized by eGangotri

ಏಕತಾಳ ॥ ಕ್ರೂರರಾದಾ ಚೋರರು । ದಯ ದಾಕ್ಷಿಣ್ಯವಿಲ್ಲಾದೇ ॥ ವಿಕ್ರಮನೆಳೆದೋಯ್ದು । ಊರು ಆಚೆಗೇ ॥ ೧ ॥ ಕಡಿದಾರು ಕೈಕಾಲುಗಳ ಸಂಗರದಿಂ ತಾವು ॥ ಮೂಢರು ಅವರಲ್ಲಾ ॥ ಘಾಸಿಕೊಟ್ಟರೂ ॥ ೧ ॥ ವಿಕ್ರಮರಾಯಗೆ ॥ ಘಾಸಿಬಂದಿತು ಕೇಳೂ ॥ । ಸುರಿದಾವು ನೇತ್ರದೊಳ್ । ಕೇಳೀಗ ನೀವೂ ॥ ೩ ॥ ಹರಹರ ಮಹಾದೇವಾ । ಸಂಹರ ಪಾಪಾ ॥ ಮರಿಯದೆ ಹರಹರ । ಧ್ಯಾನ ಮಾಡೀದರಾಯಾ ॥ ೪ ॥

ವಚನ ॥ ಇಂತೆಂದು ವಿಕ್ರಮನ ಕೈಕಾಲುಗಳನ್ನು ಕತ್ತರಿಸಿ ತಮ್ಮ ರಾಯನ ಬಳಿಗೆ ಬಂದು ನಿಲ್ಲಲು ಚರರಿಗೆ ಚಂದ್ರಶಯನರಾಜನು ಏನೆಂದು ಕೇಳುತಿರ್ದಾರೆಂದೆಂತೆನೇ.

ತ್ರಿವುಡೆ ॥ ಸತ್ತುಹೋದನೊ ಮತ್ತೆ ಬದುಕೋನೆ । ಏನು ಆಯಿತು ಹೇಳಿಯೆನುತಾ ॥ ಭೃತ್ಯರನ ಕೇಳುತ ಇರವೋನು । ಚಂದ್ರಶಯನಾ ॥ ೧ ॥ ಸ್ವಾಮಿಯಿನ್ನು । ಅವನು ಬದುಕುವಬಗೆಯು । ಹ್ಯಾಂಗೆ ಹೇಳಿ ನೀವಿನ್ನು ॥ ಅವಮಗೆ ಕೈಕಾಲಿಲ್ಲವಾಯಿತು ॥ ಅನ್ನಾನೀರು ಇನ್ನು । ೨ ॥ ಯಾರುಕೊಡು ವೋರು ಹ್ಯಾಂಗೆ ಬದುಕೋನು ಸತ್ತುಹೋಗುವ ಕೇಳಿ ನೀವಿನ್ನು ಎಂದು ನುಡಿದರು ಚಂದ್ರಶಯನಕೊಡೆ । ಚರರೂ ॥ ೩ ॥

ವಚನ ॥ ಇಂತೆಂದು ಇತ್ತ ವಿಕ್ರಮಾದಿತ್ಯನು ಕಳವಳಗೊಳ್ಳುವದನ್ನು ದಾರಿಕಾರರು ಕಂಡು ಏನೆಂದುಕೊಳ್ಳುತಿರ್ದಾರೆಂದೆಂತೆನೇ

ಏಕತಾಳ ॥ ಅಘ-ರೀಖ ॥ ಯಾರೀಗ ಇವನಿಗೆ । ಘಾಸಿಕೊಟ್ಟರೋ ಯಾರುಕಡಿದದಾರೂ । ಇವನಾ ಕೈಕಾಲುಗಳನೂ ॥ ೧ ॥ ಇದುಯೇನು ಆಶ್ಚರ್ಯ । ಎನ್ನುತ ಜನರೂ ॥ ಅನ್ನನೀರು ಕೊಡಲು ರಾಜನಾಜ್ಞೆಯೊ ॥ ೨ ॥ ದೀನನಾಥ ಇವಗೆ ಕಾಯ್ಬೇಕು ಎಂದೂ ॥ ೩ ॥

ವಚನ ಇಂತೆಂದು ಈ ಮೇರೆಗೆ. ವಿಕ್ರಮರಾಜನು ಮಹಾದುಃಖ ದಿಂದ ಒಂದು ಮಾಸವನ್ನು ಕಳೆಯಲು ಯಾರಿಗೂ ದಯದಾಕ್ಷಿಣ್ಯವು ಗ್ರಹದ ದೆಸೆಯಿಂದ ಬಾರದಿರಲು. ರಾಯನು ಶೋಕಾಂಬುಧಿಯಲ್ಲಿ ಮುಳುಗಿ ಗ್ರಹ ...

Sri Vidyabharathi Book Centre, Sringeri

CC-O. In Public Domain. Digitized by eGangotri

ಏಕತಾಳ॥ ಶನಿಯ ದೇವಾ ಸೇನೆ ದೀನನ ಕಾಯಿನ್ನೂ 1 ಎನ್ನೂತ ವಿಕ್ರಮ ಶನಿರಾಜನನ್ನು ॥೧॥ ಅಧಿಕಸ್ತುತಿಯಲಿನಿಂದು . ಭಜಿಸಾಲೂ ಬಂದ ಕರುಣಾವು ಶನಿದೇವಗಿನ್ನೂ ॥೨॥ ಇವನ ಸತ್ಯಕೆಯಿನ್ನು ಎ ಯಿಲ್ಲಯನುತ । ಇವನಿಗೆ ಪೀಡಿಸಬಾರದು ಈಗಾ ॥೩॥ ಶನಿಮಹಾರಾಜನು ಇವನ ಕಾರ್ಯ್ಯಕಯೆಂದೂ ಚಂದ್ರಾಶಯನಾನೀಗೆ ಕರುಣಾವುಕೊಟ್ಟೊ ॥೪

ವಚನ॥ ಇಂತೆಂದು ಶನಿದೇವರ ಕರುಣೆಯುಂಟಾಗಲೂ ಚಂದ್ರಶಯ ರಾಜನು ತನ್ನ ಪುರದಲ್ಲಿ ಡಂಗೂರವನ್ನು ಹಾಕಿಸಿ ಕೈಕಲು [ಹೋದ ತಸ್ಕರನಿಗೆ ಆಹಾರವನ್ನು ಯಾರುಬೇಕಾದರೂ ಕೊಡಬಹುದೆಂದು ಹೇಳಲು ಪುರಜನ ವಿಕ್ರಮನಿಗೆ ಅನ್ನನೀರು ಕೊಡುತಿದ್ದಾರದೆಂತೆನೆ

ಏಕತಾಳ ॥ ಅರ್ಧರೇಖು ॥ ಸತ್ಯವಂತಾರಾದಾ ಕೃಪಾಳುಜನರೂ ನಿತ್ಯ ಆಹಾರವು ತಾವು ಕೊಡುತ್ತಾಯಿರಲೂ ॥೧॥ ಆಯಿತು ವಿಕ್ರಮಗೆ ಅನಾದಸುಖವೂ । ಆದರೂ ಕೈಕಾಲುಕಡದಾ ದುಃಖಾವೂ ॥ ಇರುವೋದುರಾಯಗೆ ನಿರ್ಮಾಲವಿಲ್ಲಾವೂ ॥೨॥

ವಚನ॥ ಇಂತೆಂದು ಈಮೇರೆ ವಿಕ್ರಮನು ಎರಡು ಸಂವತ್ಸರಗಳನ್ನು ಕಳೆಯಲು ತದನಂತರ ಒಂದಾನೊಂದು ದಿವಸ ಉಜ್ಜನಪುರದಿಂದ ತಾನು ಲಿಂದಾಪುರಕ್ಕೆ ಹೋಗಲು ಗಾಣಿಗರು ಪಯಣವಾಗಿ ಬರುತಿದ್ದಾರದೆಂತೆನೆ

ಜಂಪೆ॥ ಉಜ್ಜನಪುರದಾತೇಲಿ। ತಾವುಲಿಂದಾಪುರಕ್ಕ॥ ತನ್ನ ಮಗಳನ್ನು ಕೊಟ್ಟ । ಲಗ್ನಮಾಡಿರಲೂ ।೧॥ ತಾವುಲಿಂದಾಪುರದಿ 1 ಮಾವ ಅತ್ತೆಯು ಬಂದೂ॥ ತಮ್ಮ ಸೊಸೆಗೆ ತಾವು ॥ ಕರೆದೊಯ್ಯುವೆವೆಂದು ॥೨॥ ಪಾಲಕಿಯನ್ನಿ ತನ್ನ ಸೊಸೆಗೆ ಕೂಡಿಸಿಕೊಂಡು॥ ತೇಲಿಹೊರಟನು i ತನ್ನ ಊರಿಗೆ ಇನ್ನೂ ೩

ವಚನ ॥ ಇಂತೆಂದು ತೇಲಿಯು ತನ್ನ ಸೊಸೆಯನ್ನು ಕರೆದುಕೊಂಡ ವಿಕ್ರಮರಾಜನು ಬಿದ್ದಿರುವ ಮಾರ್ಗದಲ್ಲಿ ಬರಲು ಆ ತೇಲಿಯ ಸೊಸೆಯು ವಿಕ್ರಮನನ್ನು ಕಂಡು ಪಾಲಕಿಯಿಂದ ಇಳಿದು ರಾಜನ ಚರಣಕ್ಕೆ ನಮಸ್ಕರಿಸಿ ರಾಜನಂ ಕಂಡು ದುಃ[illegible]ತೆನೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಜಂಪೆ ॥ ಮನದಲಿ ತಾನೊಂದು । ಏನು ಆಶ್ಚರ‍್ಯವೆಂದು ॥ ಇನ್ನಿ ನಿಮಗೆ ಇಲ್ಲಿ ॥ ತಂದೋರುಯಾರೂ ॥೧॥ ಕಾಲುಕೈಗಳನು ! ಕೊಯ್ದು ಹಾಕಿದವರಾರೂ॥ ಬಾಲೆಕೇಳುತ ತಾನು । ಮನದಲಿ ನೊಂದೂ ॥೨॥ ಹರಹರ ಎನ್ನುತ । ರಾಯನಿಗೆ ಕೇಳಲಾಗಾ॥ ನಾರೀಗೆವಿಕ್ರಮನು । ನೋಡಿ ತಾನೆಂದ ॥೩॥ ಮುತ್ತೈದೆತನ ನಿನಗೆ । ಶಾಶ್ವತವಾಗಲಮ್ಮ ॥ ಮತ್ತೆನಮ್ಮ ಪುರದ । ವೃತ್ತಾಂತಪೇಳಮ್ಮಾ ॥೪॥ ಸರ್ವಜನರು ಕ್ಷೇಮವ ಗಿರುವರು ನಿಮ್ಮ । ಪುರದೊಳಗೆ ಮಹಾರಾಜ ಕೇಳು ವಿಕ್ರಮಾ ॥೫॥ ನಿಮ್ಮ ದೇಹಕ್ಕೆ ಬಾಧೆ ಬಂದು ಇರುವುದು ಯಾಕೆ । ನಮ್ಮಾಗೆಪೇಳೆಂದು । ಕೇಳದ್ಛಾಕೆ ೬॥

ವಚನ ॥ ಇಂತೆಂದು ನಾರಿಯು ಕೇಳಲು ವಿಕ್ರಮರಾಜನು ಬಾಲೆಯೊಡನೆ ತನ್ನ ವೃತ್ತಾಂತವೆಲ್ಲ ಪೇಳುತಿರ್ದಾನೆಂತೆನೆ

ತ್ರಿಪುಡೆ ॥ ಕೇಳು ಪತಿವ್ರತೆ ಎನಗೆಬಂದುದು । ಘಾಶಿಪೇಳುವೆ ಕೇಳುಯೆಂದನೂ ॥ ಬಾಳುಗೆಡಿಸಿತು ಕರ್ಮಭೋಗವು। ಬಾಲೆ ಕೇಳೂ ।೧॥ ಎನಗೆ ಗ್ರಹಗತಿ ಅನುಕೂಲವಿಲ್ಲದಿರೆ! ತನಗೆ ಇಷ್ಟುಬಂತೂ॥ ಇನ್ನು ಹೇಳುವದೇನು ಕೇಳು। ನೀನುಯಿನ್ನೂ ॥೧॥ ಇದುಯೆಲ್ಲಾ ದೇವರ ಮಾಯೇ।ಬಾಲೆ ಕೇಳಬಂದ ಸುಖ॥ ದುಃಖ ಬಿಟ್ಟುಪೋಪುದೆ। ಕೇಳು ನೀನು ಇನ್ನೂ ॥೩॥

ವಚನ। ಇತ್ತೆಂದು ವಿಕ್ರಮರಾಯನು ತನಗೆ ಪೂರ್ವದಿಂದ ಬಂದ ದುಃಖಗಳೆಲ್ಲವನ್ನೂ ಪತಿವ್ರತೆಯಾದ ಗಾಣಗಿತ್ತಿಯ ಕೂಡೆ ಪೇಳಲು ಅವಳು ಆಶ್ಚರ‍್ಯಪಟ್ಟು ನೀವು ಮಹಾಪುರುಷರು, ಧನ್ಯರು ಎಂದು ಹೇಳಿ ರಾಯನನ್ನು ತನ್ನ ಮಂದಿರಕ್ಕೆ ಕರೆದುಕೊಂಡು ಹೋಗುತಿರ್ದಾಳದೆಂತೆನೆ.

ಏಕತಾಳ । ಪಾಲಕಿಯೊಳು ತಾನು ರಾಯಗೆ ಕೂಡಿಸಿ। ಕರಕೊಂಡು ಹೊರಟಾಳು ತನ್ನ ಮಂದಿರಕೆ। ॥೧॥ ನಾನಾ ಬಗೆಯ ಪ್ರಚಾರ ಮಾಡುತಾ ತಾನೀಗ ಕರೆದುಕೊಂಡುಬಂದಾಳುಬೇಗಾ ॥೨॥ ಆಗ ಆಕೆಯುಮಾವ ಕಾಣುತ ಬೆದರಿದಾ । ಈ ಗ್ರಹವಮನೆಗ್ಯಾಕೆ ತಂದೆನೀಯೆಂದಾ ॥೩॥ ಗಡಗಡನಡುಗಿದ ಗಾಣಿಗಕೇಳಿನ್ನೂ । [illegible] ॥೪॥

Sri Vidyabharathi Book Centre, Sringeri

CC-O. In Public Domain. Digitized by eGangotri

ವಚನ ॥ ಈತೆಂದು ಗಾಣಿಗನು ತನ್ನ ಸೊಸೆಗೆ ಹೇಳಲು ಆಗ ಮಾವನ ಕೂಡೆ ಬಾಲೆಯು ಏನೆಂದು ಪೇಳುತಿರ್ದಾಳದೆಂತೆನೆ

ತ್ರಿಪುಟೆ॥ ಇವರೆ ಉಜ್ಜನಪುರದ ಅರಸು। ಇವರೆ ವಿಕ್ರಮನೆಂಬೋರು॥ ಇವರಿಗೆ ಗ್ರಹಪೀಡೆಯಿಂದಲಿ । ಈಕಷ್ಟಬಂತೂ॥೧॥ ಧರ್ಮನೀತಿಲಿ ರಾಜ ವಾಳೋ। ನಿರ್ಮಲದ ರಾಜತೇಜರೂ॥ ಕರ್ಮಫಲದೀಕಷ್ಟಬಂತೂ। ಎಂದಳ ವಳೂ ॥೨। ರಕ್ತಿ ತಪ್ಪೆ ಯೊಳಿದ್ದ ತೆರದಲಿ । ಸತ್ಯವಂತ ರಾಜನಿರುತಿರೇ॥ ಈಂತು ಪಿತನ ಕರುಣಾನರ್ಗರೆ । ರಾಜಯಿ ಂದೇ ॥೩॥ ನಮ್ಮ ಮನೆಗೆ ಬಂದ ಮಾವನೇ ನಮ್ಮ ಕರ್ಮವು ಆರದುಹೋಯಿತೂ॥ ಸುಮ್ಮನೇ ಕಳವಳವು । ಬೀಳುವೋ ದ್ಯಾಕೆಯಿನ್ನೂ ॥೪॥

ವಚನ । ಇಂತೆಂದು ಮಹಾಪತಿವ್ರತೆಯಾದ ಬಾಲೆಯು ತನ್ನ ಮಾವನ ಕೂಡ ಅಂತರಂಗವಾಗಿ ವಿಕ್ರಮನೆಂದು ಹೇಳಲು ಆತನು ಚಂದ್ರಶಯನ ರಾಜನ ಬಳಿಗೆ ಬಂದು ಏನೆಂದು ಕೇಳುತಿರ್ದಾನದೆಂತೆನೆ

ಸೊಬಗಿನಸೋನೆರ್ವ ॥ ರಾಜಕರಾಳು ಸ್ವಾಮಿಪರಾಳು । ತಮ್ಮ ಆಜ್ಞೆಯೊಳಿದ್ದ ತಸ್ಕರನಾ ॥೧॥ ನಮ್ಮಮನಿಗೇ ತಂದು ಅನ್ನವಕೊಡೇ । ಆಜ್ಞೆಯಾಗೋದೇ ಸ್ವಾಮಿಯಿಂದಾ ॥೨॥ ತಮ್ಮಾಜ್ಞೆಯಾದತಸ್ಕರಗೇ । ನಮ್ಮಾ ಮನೆಯಲಿತಂದು ಇಡುವೇ ॥೩॥ ಅವನಿಗೆ ಪೋಷಣೆ ಮಾಡುವೆ ರಾಜನೆ। ಅಪ್ಪಣೆ ಕೊಡು ಎಂದು ಬಿನ್ನಪಿಸೇ ॥೪॥

ವಚನ॥ ಇಂತೆಂದು ತೇಲಿಯು ಚಂದ್ರಶಯನರಾಜನಿಗೆ ಬಿನ್ನಹವಂ ಮಾಡಿ ಕೇಳಿಕೊಳ್ಳಲು ಆಗ ತಾವುಲಿಂದನಗರದರಾಜನು ಏನೆಂದು ಹೇಳು ತಿರ್ದಾರದೆಂತೆನೆ

ಯಾಲಪದ॥ ಭಲರೇ ನೀನು ಭಾಗ್ಯವಂತಾ । ನಿನ್ನ ಸತ್ಯಕೆ ಮೆಚ್ಚಿ ಈಗ। ಅಪ್ಪಣೆಯನ ಕೊಟ್ಟೆ ಹೋಗೆಂದಾ ॥ ಓ ಗಾಣಿಗರೋನೆ ! ನೀನು ಕಳ್ಳನತಂದು ಸಾಕೆಂದಾ ॥೧॥ ದಯದಾಕ್ಷಿಣ್ಯನಿನ್ನಲ್ಲುಂಟೂ । ಭಯಭಕ್ತಿ ಗಳುಂಟೂ ಕಾಯಹೀನನ ಕಾಪಾಡೆಂದಾನೂ ॥ ಓ ಗಾಣಿಗರೋನೆ । ಭಯ ಬ್ಯಾಡ ಹೋಗೂಯೆಂದಾನೂ ॥೨॥

ವಚನ ॥ ಇಂತೆಂದು ಚಂದ್ರಶಯನನು ಅಪ್ಪಣೆಯಂ ಕೊಡಲ

Sri Vidyabharathi Book Centre, Sringeri

CC-O. In Public Domain. Digitized by eGangotri

ತೇಲಿಯು ತನ್ನ ಮನೆಗೆ ಸಂತೋಷದಿಂದ ಬರಲು ವಿಕ್ರಮರಾಯನು ತೇಲಿಯ ಕೂಡೆ ಏನೆಂದು ಪೇಳುತಿರ್ದಾನದೆಂತೆನೆ

ಜಂಪೆ॥ ಕೇಳಯ್ಯಾ ಸ್ನೇಹಿತನೇ। ಅಳುಕೊಡದಿರು ಜನಕೇ ॥ ಕಳೆಗುಂದಿ ವಿಕ್ರಮನು ಇಷ್ಟಿಹನೆಂದೂ ॥೧॥ ಮರ್ಯಾದೆಯಿರಲಿಬೇಕು। ಕರ್ಮಹರಿಯುವರೆಗೂ॥ ನಮಗಿನ್ನು ಆಪ್ತರು ನೀವೂ ॥೨॥ ನಿಮ್ಮ ಉಪಕಾರವು। ನಮ್ಮ ಮೇಲಿ ಬಹಳವಿದೇ ॥ ನಮ್ಮ ಕಷ್ಟಕೆಯಿನ್ನು ಆದ ಮಹಾತ್ಮರೇ ॥೩॥ ಎಂದು ವಿಕ್ರಮನುಡಿಯು। ಸಂತೋಷಬಟ್ಟು ತೇಲೀ। ಇಂದು ನಮ್ಮ ಗಾಣಾ। ಹೊಡೆಯಬೇಕೆಸ್ಸೀ ॥೪॥ ಅನ್ನವಸ್ತ್ರವು ನಾವು। ಚೆನ್ನಾಗಿ ಕೊಡುವೆವೂ॥ ಜನರೀಗೆಮರ್ಯಾದೆವು। ಕಡಿಮಾದೆಯಿರಲೂ ॥೫॥

ವಚನ॥ ಇಂತೆಂದು ತೇಲಿಯು ನುಡಿದ ಮಾತಿಗೆ ರಾಜನು ಮೆಚ್ಚಿ ನಿಮ್ಮ ಬುದ್ಧಿಗೆ ಎಣೆಯಿಲ್ಲವೆಂದು ಹೇಳಿ ಹಾಗೇ ಆಗಲಿಯೆಂದು ಗಾಣದ ಮೇಲಿ ಕುಳಿತು ಗಾಣವನ್ನು ಹೊಡೆಯುತಿರ್ದಾನದೆಂತೆನೇ

ತ್ರಿಪುಡೆ॥ ಮೊಂಡಕೈಯೊಳು ಎತ್ತುಗಳಾ ಹೊಡೆಯುತಾ ಚಂದ ವಿಕ್ರಮರಾಜನಿರುತಿರೇ ॥ ಅಡಿಗಡಿಗೆ ಬಾಸುಲ್ಲಿ ಎತ್ತುಗಳ ಬೆದರಿಸಿಕೊಂಡೂ ॥೧॥ ಕಾಲಕಳೆಯುತ ಲೋಲ ವಿಕ್ರಮ। ತೇಲಿ ಮನೆಯೊಳು ಗಾಣ ಹೊಡೆಯ ತಾ॥ ಲೀಲೆಯೊಳು ವರ್ಷಗಳು ಕಳೆದನು। ಲೀಲೆಯಿಂದಾ ॥೨॥ ಒಂದು ದಿವಸ ಮನಕೆಹರುಷವು। ಬಂದಿತಯ್ಯ ರಾಜಗೆ। ಅಂದು ಗಾಣದ ಮೇಲಿ ಕುಳಿತೊ ತಾ ಲೀಲೆಯಿಂದಾ ॥೩॥

ವಚನ॥ ಇಂತೆಂದು ರಾಜವಿಕ್ರಮನು ಒಂದಾನೊಂದು ದಿವಸ ರಾತ್ರಿಯಲ್ಲಿ ಸಂತೋಷಭರಿತನಾಗಿ ದೀಪಕಮಾಲಾರಾಗವನ್ನು ಪಾಡಲು ಪಟ್ಟಣದಲ್ಲೆಲ್ಲಾ ದೀಪಬೆಳಕಾಯಿತೆಂತೆನೇ

ದ್ವಿಪದೇ। ರಾಜ ವಿಕ್ರಮನಾಗ ದೀಪಕಮಾಲಾ। ರಾಗವನ್ನು ಪಾಡೆ। ನಗರ ಪ್ರಕಾಶಾ ॥೧॥ ಎಲ್ಲಿ ನೋಡಿದರಲ್ಲಿ ದೀಪಜ್ಯೋತೀ। ಕಲಿರಾಜಕಾಯುವ ವಿಕ್ರಮಗೆ ಅಲ್ಲೀ ॥೨॥ ಸುಸ್ವರದರಾಗಕೆ। ಸುರಿದಾವು ಪ್ರಕಾಶ। ಅದಾವ ಕಡೆ ನೋಡೇ ಹಚ್ಚಿದವು ದೀಪಾ ॥೩॥ ಒಂದು ಕಂಭದ ಮಹಡಿ। ಮೇಲೆ ತಾನಿದ್ದೀ। ಪದ್ಮಾವತಿಯು ತಾನು ದೀಪಗಳು ನೋಡೀ ॥೪॥ ಇದು ಏನು ಆಶ್ಚರ್ಯ। ಹರಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಯೋದು ನ ಡಿಯೋ ॥ ಅಕ್ಷಣ ಗೌಡಿಯರಿಗೆ । ತಾನಾಗಕಳುಹೇ ॥೫॥

ವಚನ। ಇತ್ತಂದು ಪದ್ಮಾವತಿಯು ತನ್ನ ದಾಸಿಯರನ್ನು ಕರೆದು ದೀಪಕವಾಲಾರಾಗವನ್ನು ಹಾಡುವವರು ಯಾರೋ ನೋಡಿ ಕರೆದುಕೊಂಡು ಬನ್ನಿರೆಂದು ತನ್ನ ದಾಸಿಯರಿಗೆ ಹೇಳಲು ತಕ್ಷಣವೇ ದಾಸಿಯರು ಹುಡುಕುತಿರ್ದಾರದೆಂತೆನೇ,

ಏಕತಾಳ ॥ ಇತ್ತ ದೀಪಕವಾಲಾರಾಗವು ಪೂರೈಸೇ । ಸತ್ಯವಂತನಾದ ವಿಕ್ರಮನಾಗಾ ॥ ೧ ॥ ತಾಥೈಯ್ಯಾಥೈಯ್ಯಾ ಎಂದು ಶ್ರೀರಾಗ ಪಾಡಲೂ ಕಾಂತೆಯರಿಗೆ ಹೆಚ್ಚಿತೂ ಮೋಹವು ಬೇಗಾ ॥ ೨ ॥

ವಚನ ॥ ಇಂತೆಂದು ರಾಗವನ್ನು ಪಾಡುತ್ತಿರುವ ವಿಕ್ರಮನನ್ನು ದಾಸಿಯರು ಹುಡುಕುತಿರ್ದಾರದೆಂತೆನೇ,

ತ್ರಿಪುಡೆ ॥ ಕೇರಿಕೇರಿಯು ಬೀದಿಬೀದಿಯು । ಸಾಂಹೊರಟಳು ನಾರಿಜನರೂ ॥ ಎಲ್ಲಿನೋಡಲು ಕಾಣಲಿಲ್ಲವು ಹುಡುಕಿತಾವೂ ॥ ೧ ॥ ಮೆಲ್ಲಮೆಲ್ಲನೆ ತೇಲಿಮನೆ ಬಳಿ ॥ ಬಂದುನಿಂತರು ಇವನೆಯೆನ್ನುತಾ ॥ ಲಲಿತವಾಗಿಹ ರಾಗತೆ ಪಾಡಿದ ತ್ಕರನ ಎಂದೂ ॥ ೨ ॥ ತಿರುಗಿ ತನ್ನ ಅರಸಿಬಳಿಗೆ ॥ ಬಂದು॥ ಪೇಳಿದರಿವನವಾರ್ತೆಯಾ ॥ ಚೋರನಾದ ಕನ್ನ... ॥ ಕೇಳಿ ನೀವೂ ನಿವ್ವ ತಂದೆಯು ಅವನ ಕೈಕಾಲ್ ॥ ಕಡಿಸಿಹಾಕಿದ ರಾಣಿ ಕೇಳೊ ಅವನ ತಂದರೆ ದೊರೆಯು ನಮ್ಮನು ॥ ದಂಡಿಸುವನೂ ॥ ೪ ॥ ಅವನು ತೇಲಿಯ ಮನೆಯ ಗಾಣ ॥ ಹೊಡೆಯುವನು ಕೇಳಿ ನೀವಿನ್ನೂ ॥ ಅವನವಾರ್ತೆಯು ಏನುಪೇಳೋದು ಕಳ್ಳನವನೂ ॥ ೫ ॥

ವಚನ ॥ ಇಂತೆಂದು ದಾಸಿಯರು ಪದ್ಮಾವತಿಗೆ ಹೇಳಲೂ ಪದ್ಮಾವತಿಯು ಕೋಪದಿಂದ ನಿಮಗ್ಯಾಕೆ ಇಷ್ಟು ಮಾತುಗಳು ? ಆತನೇ ನನ್ನ ರಮಣನು ಕಳ್ಳನಾದರೆ ಆಗಲಿ ಆತನನ್ನು ಕರೆತರಬೇಕೆಂದು ಹೇಳಲು ದಾಸಿಯರು ಏನೆಂದು ಹೇಳುತಿರ್ದಾರದೆಂತೆನೇ..

ಯಾಲಪದಾ ॥ ನಮ್ಮ ... ನನ್ನ ॥ ನಾವು ಹೇಳಬೇಕು ಇನ್ನೂ

Sri Vidyabharathi Book Centre, Sringeri

CC-O. In Public Domain. Digitized by eGangotri

ಅಮ್ಮ ಸುಮ್ಮನೇ ರಠರಲಾಗದೂ ॥ ಓ ಪದ್ಮಾವತಿಯೇ ॥ ಸಮ್ಮೋಹಿತಬಾ ಬರುವೋದೂ ॥ ೧ ॥ ಇವರು ಆಡಿದಮಾತಿಗಾಗ ॥ ಪದ್ಮಾವತಿಯು ಹೇಳಿದಳಾಗಾ ॥ ಭೀತಿಬ್ಯಾಡೀ ಹೋಗಿಯೆನುತಾ ॥ ಓ ದಾಸಿಯರೇ ॥ ಕರೆದು ತರಬೇಕೆನುತಾ ॥ ೨ ॥

ವಚನ ॥ ಇಂತೆಂದು ಪದ್ಮಾವತಿಯು ಮಾತಿನಮೇರೆ ದಾಸಿಯರು ಗಾಣಿಗನ ಮನೆಬಳಿಗೆ ಬಂದು ಗಾಣಿಗನಿಗೆ ಕೇಳಿ ವಿಕ್ರಮನನ್ನು ಕರೆದು ಕೊಂಡು ಬಂದು ಪದ್ಮಾವತಿಯುಬಳಿ ಬಿಡಲು ಪದ್ಮಾವತಿಯು ವಿಕ್ರಮನನ್ನು ನೋಡಿ ಸಂತೋಷಪಟ್ಟು ಏನೆನ್ನುತಿರ್ದಾಳದೆಂತೆನೆ.

ಜಂಪೆ ॥ ರಾಗಜ್ಞಾನದೊಳುನೀವೂ । ಶೃಂಗಾರಭರಿತರೂ ॥ ಈಗ ತಾವು ರಾಗಪಾಡಲುಬೇಕೂ ॥ ೧ ॥ ಎಂದಮಾತನುಕೇಳಿ । ವಿಕ್ರಮರಾಯ ತಾನೂ ॥ ಚಂದದಿಂರಾಗ ಪಾಡುತಾ ಇರಲೂ ॥ ೨ ॥ ಇಂದ್ರಲೋಕದವ್ರೊಲು ಮಂದಿರವು ಆಗಿಲ್ಲೂ ॥ ಚಂದ್ರಶಯನ ತನ್ನ । ಮಂದಿರದಿ ಎದ್ದೂ ॥ ೩ ॥ ಇಂದು ತನ್ನಯ ಮಗಳ । ಮಂದಿರದಿ ಬಹುರಾಗ ॥ ಇಂದು ಆಗಲು ಕಾರ್ಯವೇನೆಂದರಾಯು ॥ ೪ ।

ವಚನ । ಇಂತೆಂದು ದಾಸಿಯರಿಗೆ ರಾಯನು ಕೇಳಲಾಗಿ ನಮ್ಮ ಅಪರಾಧವನ್ನು ಕ್ಷಮಿಸಬೇಕೆಂದೂ ತಮ್ಮ ಕುಮಾರ್ತಿಯ ಮಂದಿರದವರಿಗೂ ದಯಮಾಡಿಸಿ ನೋಡಿದರೆ ಎಲ್ಲಾ ವಿವರವೂ ತಿಳಿದುಬರುತ್ತೆಂದು ದಾಸಿಯರು ಚಂದ್ರಶಯನನಿಗೆ ಹೇಳಲು ಅಷ್ಟರಲ್ಲಿ ರಾಜನಿಗೆ ಮಾಯದ ನಿದ್ರೆ ಬರಲು ಮಲಗಿದನು ಇತ್ತಲಾ ಪದ್ಮಾವತಿಯು ತನ್ನ ಮಂದಿರದಲ್ಲಿ ನಿದ್ರೆಬರಲು ಮಲಗಲು ಮುಂಜೆಯಾಗುವ ಆಶ್ಚರ್ಯವನ್ನು ಪೇಳುತಿರ್ದಾರದೆಂತೆನೆ

ಏಕತಾಳ ॥ ಇತ್ತ ಪದ್ಮಾವತಿ । ನಿದ್ರೆಗೈಯಲು ಕೇಳು । ಕುಂತಾನು ವಿಕ್ರಮ । ಚಿಂತೆಯೊಳು ತಾನೂ ॥ ೧ ॥ ಎನ್ನ ರಾಜ್ಯವುಯನಗೆ ॥ ಎಂದೀಗೆ ದೊರಕೀತೊ ॥ ಶನಿರಾಜನ ಕೃಪೆ ಎಂದಿಗಾಗುವುದೋ ॥ ೨ ॥ ಎನ್ನುತ ವಿಕ್ರಮ ಮನದಲಿ ಚಿಂತಿಸೇ ॥ ಘನಕಷ್ಟಹರಿಯುವಾ ಕಾಲಬಂತೈಸೇ ॥ ೩ ॥

Sri Vidyabharathi Book Centre, Sringeri

CC-O. In Public Domain, Digitized by eGangotri

ಅಲ್ಲಿಗೆ ತೊಂಬತ್ತು । ತಿಂಗಳಾಗಲುಕೇಳೊ ॥ ಕಲಿರಾಜನಾಸ್ತುತಿಮಾಡೆ । ವಿಕ್ರಮನೂ । ೪ ! ಆಗ ಶನಿದೇವ । ಪ್ರತ್ಯಕ್ಷವಾಗಿ । ಗರ್ವಿಷ್ಟ ವಿಕ್ರಮನೇ । ಗುಣವಂತೆಂಬೆ ಎನಲೂ ॥೫॥ ಈಗ ನಿನಗೆ ನನ್ನ । ಮಹಿಮೆತಿಳಿದು ಬಂತೇ । ಗರ್ವವೇಳಿಯಿತೇನೊ, ವಿಕ್ರಮನೇ ॥೬॥

ವಚನ॥ ಇಂತೆಂದು ಶನಿರಾಜನು ಪ್ರತ್ಯಕ್ಷನಾಗಿ ಮಾತಾನಾಡಲು ವಿಕ್ರಮನು ಎದ್ದು ನಮಸ್ಕಾರವನ್ನು ಮಾಡಲು ಕೈಕಾಲುಗಳು ಇಲ್ಲದಕಾರಣ ಹಾಗೆಯೇ ಹೊರಳಿ ನಮಸ್ಕಾರವನ್ನು ಮಾಡಲು ವಿಕ್ರಮನಿಗೆ ಶನಿದೇವರು ಏನೆಂದು ಹೇಳುತಿರ್ದಾರದೆಂತೆನೆ

ಏಕತಾಳ—ಅರ್ಥರೇಖು ॥ ಧನ್ಯಾನುನೀನಯ್ಯ । ವಿಕ್ರಮರಾಜಾ ನಿನ್ನಂಥಪರಾಕ್ರಮಿ । ಯಾರು ಇಲ್ಲೆಂದಾ ॥೧॥ ಪ್ರತ್ಯಕ್ಷವಾದೆನೇ । ಬೇಡು ವರಾಳ । ಕೊಡುವೆನು ಬೇಡಿದ್ದು । ಶನಿರಾಜ ಯಂದಾ ॥೨॥

ವಚನ॥ ಇಂತೆಂದು ಶನಿರಾಜನು ವಿಕ್ರಮನಿಗೆ ಪ್ರಸನ್ನನಾಗಿ ವರವನು ಬೇಡಿಕೋ ಕೊಡುವನೆಂದು ಹೇಳಲು ವಿಕ್ರಮನು ಶನಿರಾಜನಿಗೆ ಏನೆಂದು ಹೇಳಿಕೊಳ್ಳುತಿರ್ದಾನದೆಂತೆನೇ

ತ್ರಿಪುಡೆ ॥ ಸಕಲಗ್ರಹಕೆ ಶ್ರೇಷ್ಠನಾದವನು ಲೋಕನಾಥ ನೀನೆ ॥೧॥ ಬೇಡಿಕೊಂಡೆನು ನಿಮ್ಮ ಚರಣವು । ಭೂಮಿಯೊಳಿರುವಂಥ ನರರನು ॥ ಪೀಡಿಸುತದಿಲ್ಲವೆಂಬ ವರವನು । ಕೊಡುನೀನೂ ॥೨॥ ನಾನು ಬಹಳ ಕಷ್ಟದಿಂದಲಿ ಶನಿಯರಾಜನೆ ನೊಂದೆಕೇಳಿನ್ನೂ ॥ ನಾನವರಿಗೆ ಕಾಡದಂತೇ । ಭಯುವ ಕೊಡು ನೀನೂ ॥೩॥

ವಚನ ॥ ಇಂತೆಂಬ ವಿಕ್ರಮರಾಯನ ಮಾತುಗಳನ್ನು ಕೇಳಿ ಸಂತೋಷಪಟ್ಟು ವಿಕ್ರಮರಾಯನಿಗ ಶನಿದೇವರು ಏನೆಂದು ಹೇಳುತಿರ್ದಾರದೆಂತೆನೆ ।

ಏಕತಾಳ॥ ಏನಯ್ಯಾ ವಿಕ್ರಮ । ನೀನು ಸತ್ಯವಂತಾ ॥ ನಿನ್ನ ಸತ್ಯ । ಯಣೆಯಿಲ್ಲಯ್ಯ ಎಂದಾ ॥೧॥ ಭೂತದಯವುಂಟೊ । ನೀತಿ ನಿನ್ನಲ್ಲುಂಟೊ ಖ್ಯಾತಿವಂತಾನಹುದು । ವಿಕ್ರಮನೀನೂ ॥೨॥ ಕೈಕಾಲುರಾಜ್ಯವು । ಕೇಳದೆ

Sri Vidyabharathi Book Centre, Sringeri

CC-O. In Public Domain. Digitized by eGangotri

ನೀಯಿನ್ನೂ ॥ ಲೋಕಕೆ ಉಪಕಾರವಾದ ವರವನ್ನೂ ॥೨॥ ಬೇಡಿದೆಯನ್ನೊಳು । ಕೊಡುವೆನು ಕೇಳಿನ್ನೂ ॥ ಬಿಡದಂತೆ ನಿನ್ನ ಚರಿತೇ ಭಜಿಸುವರಿಗಿನ್ನೂ ॥೪॥ ಬಾಧೆಪಡಿಸುವನಲ್ಲ ! ಬಂಧನೆಕೊಡುವುದಿಲ್ಲಾ ॥ ದ್ವಾದಶದೊಳಿರಲು । ಬಿಡುವೆನು ಯೆಂದಾ ॥೫॥

ವಚನ ॥ ಇಂತೆಂದು ಶನಿರಾಜನು ಬಹಳ ಸಂತೋಷಪಟ್ಟು ವಿಕ್ರಮನ ಮೇಲೆ ಕೃಪಾವಂತನಾಗಿ ಪೂರ್ವದಲ್ಲಿದ್ದ ಸೌಂದರ್ಯಕ್ಕಿಂತಲೂ ಅತಿಶಯವಾದ ಸೌಂದರ್ಯವನ್ನೂ ಮತ್ತು ಕೈಕಾಲುಗಳನ್ನೂ ಕೊಡಲು ಶನಿದೇವರಿಗೆ ವಿಕ್ರಮನು ಸಾಷ್ಟಾಂಗನಮಸ್ಕಾರವನ್ನು ಮಾಡಿ ಏನೆಂದು ಕೇಳಿಕೊಳ್ಳುತಿರ್ದಾನದೆಂತೆನೆ

ಏಕತಾಳ॥ ನಾನುಬೇಡುವೆನೀವಾ। ನೀನುಕೊಡುವರವಾ॥ ಲೋಕೋಪಕಾರಕನಾದ । ಶನಿರಾಜ ಎಂದಾ ॥೧॥ ಮಾನವರಿಗೆ ನೀನ । ನಾನಾಬಾಧೆಗಳನ್ನೂ ॥ ಶನಿರಾಜ ಕೊಡದಂತೆ । ಎನಗೆ ಅಭಯವನ್ನೂ ॥೨॥ ಕೊಡಬೇಕುದಯಾಳು । ಬೇಡಿಕೊಂಬೆನು ಇನ್ನೂ ॥ ಬಡವನಮೇಲೆ ದಯವಿಡಬೇಕು ನೀನೂ ॥೩॥

ವಚನ ॥ ಇಂತೆಂದು ವಿಕ್ರಮರಾಯನು ಶನಿರಾಜನನ್ನು ಬೇಡಿಕೊಳ್ಳಲು ನೀನು ಬೇಡಿದ ವರಗಳನ್ನು ಕೊಟ್ಟೆನು ಆದರೆ ವಿಕ್ರಮರಾಜನೇ ನಿನಗೆ ಕೊಂಚ ದುಃಖವನ್ನು ಕೊಟ್ಟೆನು ದೇವ ದೈತ್ಯರಿಗೆ ಭಾರೀ ದುಃಖವನ್ನು ಕೊಟ್ಟಿರುವೆನು ಮತ್ತು ಗುರುರಾಯನಿಗೆ ಕೊಟ್ಟ ದುಃಖವನ್ನು ಪೇಳುತಿರ್ದಾರದೆಂತೆನೆ

ತ್ರಿಪುಡೆ ॥ ಒಂದು ದಿವಸ ನಾನು ಗುರುಬಳಿಹೋಗಿ । ವಂದನೆಮಾಡಿ ನಿಂತೂ ॥ ಕೈಗಳನ್ನು ಜೋಡಿಸಿಕೊಂಡು ಶ್ರೀಸ್ವಾಮಿಗುರುರಾಯ ಎಂದೂ ॥೧॥ ಗುರುವೆಯೆನಗೆ ಸಲಹೊ ಎನ್ನುತಾ । ಚರಣಕ್ಕೆ ವಂದನೆಯ ಮಾಡುತಾ॥ ಕರುಣಾಕರನೆ ತೊಂಬತ್ತು ವರುಷ । ಬರುವೆನೆನುತಾ ॥೨॥ ಕೇಳಿಕೊಳ್ಳಲು ಗುರುರಾಯನ ॥ ಕಳವಳಪಟ್ಟನು ಪೇಳುತಾ ॥ ತಾಳಲಾರೆವು ಒಂದು ಘಳಿಗೆಯು । ಬ್ಯಾಡವೆನ್ನುತಾ ॥೩॥ ಕರುಣಾಕರನೇ ಶನಿಮಹಾದೇವನೇ । ಎನ್ನ ಮನ್ನಿಸಿ [illegible] । ಶನಿರಾಜ

Sri Vidyabharathi Book Centre, Sringeri

CC-O. In Public Domain. Digitized by eGangotri

ಕೇಳುತಿದ ॥ ೭ ॥ ಪನ್ನಿಸಿಯ ಸೇವೆನಗೆ ಮಾಡಿವರಯನ್ನ । ಎನ್ನಾ ಲೋಕಕರೊಳನೆ ॥ ಮನ್ನಿಸುವರು ಯಾರೈಯ್ಯಾ । ಗುರುರಾಯ ಕೇಳಿನ್ನೂ ॥೩॥ ಏಳುವರುಷ ಎನಗೆ ಬರುವಂತೆ । ಅಪ್ಪಣೆಯು ಕೊಡು ದೇವ ಎನ್ನುತಾ॥ ಅಲ್ಲವಿದ್ದರೆ ಮೂವತ್ತು ತಿಂಗಳು । ಕೊಂಚವಲ್ಲನೆ ।ಗುರುವೆಯುಂದನೂ ಕರುಣ ದಿಂದ । ಕಾಯೋ ಎನುತ ಶನಿರಾಜನುಡಿದಾ ॥ ೭ ॥

ವಚನ ॥ ಇಂತೆಂದು ಶನಿರಾಜನು ತನ್ನ ಮನಸ್ಸಿನಲ್ಲಿ ಯೋಚಿಸಿ ಗುರು ವಿಗೆ ಮರಳಿ ತೊಂದರೆ ಕೊಟ್ಟರೆ ಶಪಿಸುವರು ಎಂದು ಸನ್ಮತದಿಂದ ರಾಶಿಗೆ ಪ್ರೋಗವೆನೆಂದು ಗುರುಸ್ವಾಮಿಗೆ ಏನೆಂದು ಪೇಳುತಿರ್ದಾನದೆಂತೆನೆ,

ಯಾಲಪದಾ ॥ ಗುರುವೆನಿಮ್ಮ ಕರುಣದಿಂದಾ ॥ ಈಗನಾನೂ ಪ್ರಸನ್ನ ನಾದೇ । ಬೇಡಿಕೊಳ್ಳುವವರಾ ಕೊಡುವೇನೂ ॥ ಓ ಗುರುರಾಯ ಆರುಹು ರೂಪ ನೀನೆಯೆಂದಾನೂ ॥ ೧ ॥ ಎಂದಾ ಮಾತೂ ಗುರುವು ಕೇಳೀ । ಇಂದು ಶನಿರಾಜಾನೀನೂ । ನಮ್ಮ ರಾಶಿಗೇ ಬರಲಾಗದೂ ॥ ಓ ಶನಿರಾಜಾ । ಇದೇ ವರವು ಬೇಡುತಿರ್ಪೆನೂ ॥ ೨ ॥ ಎಂದಾ ಮಾತಿಗೆ ಶನಿರಾಜಾ ಏಳೂವರೆ ಜಾವಯಾಗಾ । ಅಂದದಿಂದಾ ಬರುನುತೆಯೂ ॥ ಓ ಗುರುರಾಜಾ ಕಂದ ನಿಗೇ ಅಪ್ಪಣೆ ಕೊಡುಯೆಂದಾ ॥ ೩ ॥ ನೀವೂ ಮನ್ನಿಸದಿರ್ದರೆನಗೇ । ಲೋಕ ದೊಳಗೆ ಮನ್ನಿಸುವರ್ಯ್ಯಾರು । ನೀವು ಮನ್ನಿಸಬೇಕು ಎಂದಾನೂ ॥ ಓ ಗುರು ರಾಜಾ । ಸರ್ವಜಗಕೆ ಗುರು ನೀನೆಂದಾ ॥ ೪ ॥

ವಚನ ॥ ಇಂತೆಂದು ಗುರುವರನಿಗೆ ಶನಿದೇವರು ಕೇಳಿಕೊಳ್ಳಲು ಆದರೆ ಒಂದು ಕಾಲುಜಾವವು ನಮ್ಮ ರಾಶಿಗೆ ಬರಬೇಕೆಂದು ಅಪ್ಪಣೆಯಂ ಕೊಟ್ಟು ಮನದಲ್ಲಿ ಆಲೋಚನೆಯಂ ಮಾಡಿ ನಮ್ಮ ಸ್ನಾನಸಂಧ್ಯಾದಿಗಳಲ್ಲಿ ಹಿಂದು ಕಾಲುಜಾವವನ್ನು ಕಳೆಯುವುದೆಂದು ತಿಳಿದು ಮನಸ್ಸಿನಲ್ಲಿ ಗರ್ವವಂ ಧರಿಸಲು ಅಷ್ಟರಲ್ಲೀ ಏನು ಚಮತ್ಕಾರವನ್ನು ತೋರುವೆನೆಂದು ಶನಿದೇವರು ಆಲೋಚಿಸಿದರದೆಂತೆನೆ.

ಏಕತಾಳ ॥ ಬಂದಾನು ಶನಿರಾಜಾ । ಗುರುವರನರಾಶಿಗ ॥ ಎದ್ದಾರ್ಯ ಆಕ್ಷಣ । ಸ್ನಾನಕ್ಕೆ ಹೊರಟೇ ॥ ೧ ॥ ಬುದ್ಧಿ ... । ಭೂಲೋಕಕೆ ।

Sri Vidyabharathi Book Centre, Sringeri

CC-O. In Public Domain. Digitized by eGangotri

ತಾವೂ ॥ ಗಂಗಾಸ್ನಾನವುಮಾಡಿ । ಗುರುರಾಯುಬಂದಾ ॥ ೨ ॥ ಧರಿಸಿಬರುತ್ತಲಿದ್ದಾ ಸನ್ಯಾಸಿವೇಷವೂ ॥ ಕೈಯ ಕಕ್ಕರಿಕೆ । ಹಣ್ಣೆರಡು ಕೊಂಡೂ ॥ ೩ ॥ ಮಾಯುವೇಷದ ಶನಿ । ಗುರುವುಮುಂದೆ ತಾನಿರಡೂ ॥ ಗುರುಸ್ವಾಮಿ ಹಣ್ಣೆರಡು ಫಲಹಾರಮಾಡೆಂದೂ ॥ ೪ ॥ ಗುರುವಿಗೆ ಕೊಟ್ಟನು ಶನಿರಾಜ ಕೇಳೆಂದೂ । ಖಂಡಿಗಳ ಕೊಟ್ಟನು । ದುಡ್ಡುಗಳೆರಡೂ ॥ ೫ ॥ ಹೊರಟರು ತನ್ನ ಆಶ್ರಮಕ್ಕೆ ತಾವೂ ॥ ಸ್ನಾನಸಂಧ್ಯಾದಿಗಳು ತೀರಿಸಿ ತಾವೂ ॥ ೬ ॥ ಹಣ್ಣೆರಡು ವಸ್ತ್ರದೊಳ್ । ತಾವು ಇರಿಸಿಕೊಂಡೂ ಗುಣವಂತಬ್ರಾಹ್ಮಣ । ಬರುತ್ತಲಿದ್ದಾ । ೭ । ಒಂದು ಕೈಯಲ್ಲಿ ಹಣ್ಣು । ಒಂದು ಕೈಯಲಿ ಗಿಂಡಿ । ಹಿಡಿದುಕೊಂಡೂ ಗುರು । ಬರುತಿದ್ದಾರಿನ್ನೂ ॥ ೮ ॥

ವಚನ ॥ ಹೀಗೆ ಗುರುವರನು ಪಟ್ಟಣದ ಮಾರ್ಗವನ್ನು ಹಿಡಿದು ಬರುತ್ತಿರುವ ಸಮಯದಿ ಶನಿದೇವರು ಮುಂದೆಸಿವ ಪಟ್ಟಣವನ್ನು ಕಂಡು ಅಲ್ಲಿ ನಡೆಸಿದ ಚಮತ್ಕಾರವನ್ನು ಹೇಳುತಿದ್ದಾರದೆಂತೆನೆ.

ತ್ರಿಪುಡೆ । ಅಲ್ಲಿರುವ ಪಟ್ಟಣವು ಕೇಳಿನ್ನೂ । ಭೃಗುರಾಜನು ದೊರೆಯು ಕೇಳಿನ್ನೂ ॥ ಮಂತ್ರಿಮಾನ್ಯರು ದೊರೆಯುಸಹಿತಾ । ರಾಜ್ಯವಾಳುತಿರಲೂ ॥ ೧ ॥ ದೊರೆಗೊಬ್ಬ ಮಗನು ಇರುವನು । ಮಂತ್ರಿಗೊಬ್ಬ ಮಗನು ಕೇಳೈ । ಸ್ವಾರಿಸ್ವಾರಿಯು ಮಾಡುವೆವೆನುತಲಿ । ಹೊರಟರವರೂ ॥ ೨ ॥ ಹೊರಟುಹೋಗಿರೆ ತಡವಾಗೇ । ದೊರೆಗೆ ಭೋಜನವೇಳೆಯಾಗಲೂ ॥ ಚರರ ಕಳುಹಿಸಿ ನೋಡು ಎನುತಾ । ರಾಜ ನುಡಿದಾ ॥ ೩ ॥ ಆಗಚರರು ಬೇಗನಾರಿಲಿ ಸಾಗುತಿರೆ ಗುರುವಿಗೆ ಕಂಡರೂ ॥ ಈಗ ಇವರ ಕೈಯಲಿರುವಂಥಾ । ಹಣ್ಣು ಕಂಡೂ ॥ ೪ ॥ ರಕ್ತಧಾರೆಯು ಸುರಿಯುವುದು ನೋಡಿ । ತಪ್ತರಾಗಿ ಅಲ್ಲಿ ನಿಂತರೂ ॥ ಸತ್ಯವಂತರಾದ ಗುರುವೆ ॥ ಇದು ಏನುಯೆಂದೂ ॥ ೫ ॥

ವಚನ ॥ ಇಂತೆಂದು ಚರರು ಗುರುವರನಂ ಕೇಳಲು ಕಕ್ಕರಿಕೆ ಹಣ್ಣೆಂದು ಗುರುವರನು ಹೇಳಲು ಚರರು ಬ್ರಾಹ್ಮಣರಿಗೆ ಏನೆಂದು ಕೇಳುತಿದ್ದಾರದೆಂತೆನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಏಕಕಾಲಕ್ಕೆ ಅರ್ಥನೀಯು ॥ ಸತ್ಯವಂತರೆ ನೀವು! ಸುಳ್ಳಾಡಬಹುದೇ ॥ ಜಿಷ್ಟಧಾರಿಯುಕೇಳೋ । ಹಣ್ಣಲ್ಲಯ್ಯಂಟೆ॥೧॥ ಕತ್ತಿಗೆಯಾದ॥ಕೊಯ್ದೀರಿ ...ಂದೂ ॥ ಚರರು ದಂಡಿಸೆ ಆಗ । ಆಗ ಗುರುರಾಯ ಕಂಡು ॥೨॥ ಕನಿರಾಜನ ವ ಹಿಪೆ ॥ ಎನ್ನೊತ ತಾವು ॥ ಮಾತುಕಂಠದಿಕ್ಕಿ । ಆಡದೇ ಇರಲೂ ॥೩॥ ಅದರಾಗಳಿಗರುಪೆ । ಬಿಚ್ಚಿ ತೋರೆಂದು ॥ ಹೇಳಾಲುಗುರುವರ । ಸುಮ್ಮನೇ ಯಿದ್ದ್ದ ।೪॥ ಆಗ ಚರರು ಜೋಳಿಗೆ । ಕಿತ್ತುಕೊಂಡಾರೂ ॥೫॥

ವಚನ । ಇಂತೆಂದು ಚರರು ಜೋಳಿಗೆ ಕಿತ್ತುಕೊಂಡು ಬಿಚ್ಚಿನೋಡಲು ಅವರಲ್ಲಿ ದೊರೆ ಮಂತ್ರಿಗಳ ಮಕ್ಕಳುಗಳ ಶಿರಸ್ಸುಗಳನ್ನು ಕಂಡು ಚರಗಾರ ಗುರುವಿಗೆ ಏನೆಂದು ಪೇಳುತಿದಾರರಂತೆನೆ

ಯಾಲಪದ॥ ಏನೋ ಬ್ರಾಹ್ಮಣ ಶೀಲವಂತಾ । ಹೀನವೃತ್ತಿ ನಿನ್ನಲ್ಲೀಗಾ । ಇನ್ನು ನಾವು ಕಂಡೇವೆನ್ನೊತಾ । ಓ ಗುರುವರನೇ । ನೀನ ಚಾಂಡಾಲರಿಂದಾತವರಾಗಾ ॥೧॥ ದಯಾದಾಕ್ಷಿಣ್ಯ ನಿನ್ನಲ್ಲಿಲ್ಲಾ । ಮಾಯಾಕಾರನು ನೀನು ಎನುತಾ । ಕಾಯ ಪಿಡಿದು ಎಳೆದುಬೊಡಿಯುತ್ತಾ । ಓ ವೇಷಧಾರೀಗುರುವೇ । ಸಾಯಬೊಡದೇವು ಎಂದಾರವರಾಗಾ ॥೨॥ ಹೊಡೆದೂ ಬೊಡೆದೂ ಎಳದೂಕೊಂಡೂ । ಕಡುಕೋಪದೋಳೇ ಅವರೂ । ಹಿಡಿದು ತಂದರೂ ದೊರೆಯಬಳಿಗನ್ನೂ ॥ ಓ ಮಹಾರಾಜಾ ದೊರೆಯೇ ಕಂಡೀಗಾ ಇವನ ಮಾಯಾಪೂ ॥೩॥

ವಚನ ॥ ಇಂತೆಂದು ಚರರು ಈ ಬ್ರಾಹ್ಮಣನನ್ನು ದೊರೆಯ ಬಳಿಗೆ ಎಳೆಯೊಯ್ದು ಸ್ವಾಮಿ ॥ ಇವನು ತಮ್ಮ ಬಾಲಕರನ್ನು ಕೊಂದು ಇರುವನು ಇವನಲ್ಲಿ ಬಾಲಕರ ಶಿರಸ್ಸುಗಳು ಇರುವುದೆಂದು ಚರರು ಹೇಳಲು ರಾಯನು ಮೂರ್ಛಿತನಾಗಿ ಏನೆಂದು ಹೇಳುತಿರ್ದಾನದೆಂತೆನೆ

ರಾಗ—ಮುಖಾರಿ ॥ ಇದುಯೆನು ಆಶ್ಚರ್ಯ ಇದು ಏನುಮಾಯಾ । ಎಂದು ಕರಗಿ ದುಃಖಪಡುವೊನು ರಾಯಾ ॥ ಇದಕೆ ಗತಿಯೇನೆಂದು ಬಳಲುವನು ಈಗಾ । ಇಂದುಧರನೆ ಯನ್ನ ಕಾಯೊಯ ಎಂದಾ ॥೧॥ ಒಬ್ಬ ಮಗನು।

Sri Vidyabharathi Book Centre, Sringeri

CC-O. In Public Domain. Digitized by eGangotri

ಯಿದ್ದ ಶಂಭುಕೇಳೀಗಾ । ಅಂಬುಜೋದ್ಭವ ಆವನು ಹೋದಾನು ಈಗಾಂ ಶಂಭುಶಂಕರದೇವ ಎನ್ನ ಸಲಹೈಬ್ಯ ನಾದಾ । ಹಂಬಲಿಸಿ ಭೃಂಗರಾಜ ಮೂರ್ಛಿತನಾದಾ ॥೨॥

ವಚನ ॥ ಇಂತೆಂದು ರಾಯನು ಪ್ರಲಾಪಿಸುವ ಸಮಯದಿ ರಾಯನ ರಾಣಿಯು ಪ್ರಲಾಪಿಸುತಿರ್ದಾಳದೆಂತೆನೆ

ಸೊಬಗಿನಸೋನೆವರ್ಣ ॥ ಕರಿಪಾನೆನೆದೂ । ದುಃಖವು ಪಡುತ ॥ ಮಂದಿರದೊಳು । ತಾನು ಹೊರಳುತಾ ॥೧॥ ಇಂದಿರೇಶನೆ ಯೆನಗೆ । ಗತಿಯೇನು ಯೆನ್ನುತಾ ॥ ಕಂದಿಗುಂದಿ ರಾಣಿ ಆಗಾ ॥೨॥ ಸುಂದರಯನ್ನಾಯ, ಕಂದಾ ಯಲ್ಲಿಪ್ರೋದಾ ॥ ಬಾಧನ ಪರಿಹರಿಸು ॥ ಮುಕುಂದಾ ॥೩॥

ವಚನ ॥ ಇಂತೆಂದು ರಾಣಿಯು ಪ್ರಲಾಪಿಸುವ ಸಮಯದಿ ಕುವರನ ಸತಿಯು ಏನೆಂದು ಪ್ರಲಾಪಿಸುತಿರ್ದಾಳದೆಂತೆನೆ

ಏಕತಾಳ ॥ ಸಹಗಮನವಾಗುವೆ । ಎನ್ನಗಂಡನಕೂಡ ॥ ಹಾಹಾಕಾರ ಪಡುತಾ । ಬಾಲೆ ತಾನಿಂದು ॥೧॥ ಸಾಯುವೆಯನ್ನಾಯು । ಪುರುಷನಸರಿಯೆಂದು ॥ ಕಾಯದ ಆಸೆಯು ಬಿಟ್ಟು ಅವಳೆಂದೂ ॥೨॥ ಹರಹರಾಮಹದೇವಾ । ಮುರಹರಮಾಧವಾ ॥ ಮರಿಯಾಡೆಸುನದೊಳು ಬಾಲೆತಾನಾಗಾ ॥೩

ವಚನ ॥ ಇಂತೆಂದು ಕುಮಾರನ ರಾಣಿಯೂ ಮಂದಿರದಲ್ಲಿ ಎಲ್ಲರೂ ಪ್ರಲಾಪಿಸುವ ಸಮಯದಿ ಭೃಂಗರಾಜನು ಚರರಿಗೆ ಎನೆಂದು ಪೇಳುದಿರ್ದಾನದೆಂತೆನೆ

ತ್ರಿಪುಡೆ । ಚರರುಗಳಿಗೆ ಘೋರೆಯು ಹೇಳಿದ । ಇವನ ಎಳೆದುಕೊಂಡು ಪೋಗಿರಿ ॥ ಊರಾಚೆಗೆಯೆಂದು ನುಡಿದನು । ರಾಯ ತಾನೂ ॥೧॥ ಶೂಲ ಲೋಹದಿ ಮಾಡಿಸೀಗ । ಗಾಳಹಾಕಿರಿ ಇವಗೆಯೆನ್ನುತ್ತಾ ॥ ಬಾಲನಕೊಂಡ ಖೂಳನ । ಕೊಂತುಹೋಗಿರಿಯೆಂದಾ ॥ ೨ ।

ವಚನ ॥ ಇಂತೆಂದು ರಾಯನು ನುಡಿಯಲು ತಕ್ಷಣವೇ ಶೂಲೆಯಂ ಮಾಡಿಸಿ ಬ್ರಾಹ್ಮಣನನ್ನು ಚರರು ಎಳೆದೊಯು ಶೂಲಕ್ಕೆ ಹಾಕುವ

Sri Vidyabharathi Book Centre, Sringeri

CC-O. In Public Domain. Digitized by eGangotri

ಸಮಯದೊಳು ಬ್ರಾಹ್ಮಣನು ಚರಿಗೆ ಏನೆಂದು ಹೇಳುತಿರ್ದಾನದೆಂತೆನೆ

ಏಕತಾಳ—ಅರ್ಥರೇಖು । ಹತ್ತುಸಾವಿರ ಹೊನ್ನೂ ॥ ಕೊಡುವೆನು ಯೆಂದಾ ॥ ಎರಡುಘಳಿಗೆ ಬಟ್ರೊ ಶೂಲಹಾಕೆಂದಾ ॥ ೧ ॥ ಎಂದು ಗುರುನುಡಿದಾ ಚರರಿಗೆ ಆಗಾ । ಚತುರುಗಳೆಲ್ಲಾರೂ ಆಗಲಿ ಎಂದೂ ಪುರಸತ್ತು ಎರಡುಘಳಿಗೇ ಆಗಾ ಮಾಡಲೂ ॥ ೨ ॥

ವಚನ ಇಂತೆಂದು ಇತ್ತಲಾ ರಾಯನ ಮತ್ತು ಪ್ರಧಾನಿ ಮಕ್ಕಳು ಇಬ್ಬರೂ ಸ್ವಾರಿ ಹೋಗಿದ್ದವರು ಅರಮನೆಗೆ ಬರಲು ರಾಯನು ಕಾಡು ಚರಗಾಗಿ ಚರರಿಗೆ ಬ್ರಾಹ್ಮಣನನ್ನು ಶೂಲಕ್ಕೆ ಹಾಕಕೂಡದೆಂದೂ ಜಾಗ್ರತೆ ಯಾಗಿ ಹೋಗಿ ಕರತನ್ನಿರೆಂದೂ ಕಳುಹಲು ತಕ್ಷಣ ಚರರು ಬಂದು ಬ್ರಾಹ್ಮಣನನ್ನು ಕರೆದುಕೊಂಡುಹೋಗಿ ರಾಯನ ಮುಂದೆ ನಿಲ್ಲಿಸಲ ಭೃಗುರಾಯನಿಗೆ ಆಶೀರ್ವಾದನನ್ನು ಮಾಡಿ ಏನೆನ್ನುತಿರ್ದಾರದೆಂತೆನೆ.

ಏಕತಾಳ ॥ ದೊರೆಯೇ ನಿನಗೇ । ದೀರ್ಘಾಯುಷ್ಯ ಬರಲಯ್ಯಾ ನೀನು ಕೇಳು ನಮ್ಮ ವೃತ್ತಾಂತವೆಲ್ಲಾ ॥ ೧ ॥ ಶನಿರಾಜ ನಮಗೇ ಬಂದು ಘನಬಾದೆಪಡಿಸಿದಾ ನಿನ್ನ ತಪ್ಪಿಲ್ಲಾ ॥ ೨ ॥ ಎಂದಾನು ಗುರು ರಾಲುಜಾವಾ ॥ ಘನಬಾದೆಪಡಿಸಿದಾ ನಿನ್ನ ತಪ್ಪಿಲ್ಲಾ ॥ ೩ ॥ ಎಂದಾನು ಗುರು ರಾಯ । ಚಂದದಿರಾಯಗೆ ಸುಂದರಭೃಗುರಾಯಾ ಕೇಳಿ ಬೆರಗಾಗೆ ॥ ೩ ॥

ವಚನ। ಇಂತೆಂದು ಗುರುವರನು ಭೃಗುರಾಯನ ಕೂಡೆ ಗ್ರಹಪೀಡಿತ ವಾದ ತನ್ನ ವೃತ್ತಾಂತವೆಲ್ಲ ವಿಸ್ತಾರವಾಗಿ ಪೇಳಲು ರಾಜನು ಧೈರ್ಯಗುಂದಿ ಗುರುವರನಿಗೆ ಏನೆಂದು ಪೇಳುತಿರ್ದಾನದಂತೆನೆ.

ಜಂಪೆ॥ ಗುರುರಾಯ ನೀವಿನ್ನು। ಎನ್ನಪರಾಧವನ್ನೂ ॥ ಕ್ಷಮಿಸಬೇಕೆಂದೆ ನುತಾ । ರಾಯನುಡಿದಾನೂ ॥ ೧ ॥ ಬ್ರಹ್ಮಹತ್ಯವು ನನಗೆಪ್ರಾಪ್ತಿ ಯಾಗುತ ಲಿತ್ತೂ ॥ ಸ್ವಾಮಿ ನಿಮ್ಮ ಕರುಣದಿಂ ತಪ್ಪಿತೂಯೆನ್ನುತ ॥ ೨ ॥ ಭೃಗುರಾಯ ಘನಗುರು ಪಾದಗಳಪಿಡಿದೂ ॥ ತನ್ನ ಸಿಂಹಾಸನದ ಮೇಲೆ ಕೂಡಿಸಾಲೂ ॥ ೩ ॥ ರಾಜ ಮದದಿಂದನಾನೂ । ಅಜಮಾಯಿಷಿ ಯನ್ನೂ ॥ ಮಾಡದೇ ತಪ್ಪು ಮಾಡಿದ್ದು ನೀವೂ ॥ ೪ ॥ ಮನ್ನಿಸಿಕಾಯಬೇಕೋ ಘನಗುರುಸ್ವಾಮಿ ನೀವೂ ಎನ್ನಪಾಲಿಪ ಬಾರ‍್ಸಿದ್ದೂ ಇನ್ನೂ ॥ ೫ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ವಚನ॥ ಇತೆಂದು ರಾಯನು ಗುರುಸ್ವಾಮಿಯನ್ನು ಬೇಡಿಕೊಳ್ಳಲು ಗುರು ಭೃಗುರಾಯನ ಕೂಡೆ ಏನೆನ್ನುತಿರ್ದಾರದೆಂತೆನೆ,

ಏಕತಾಳ॥ ಯಾಕೆ ದುಃಖಪಡುವೆ। ಎಲೆಭೃಗುರಾಯನೆ॥ ನಿನ್ನಿಂದ ತಪ್ಪೀನೂ॥ ಶನಿರಾಜ ಮಹಿಮೇ ॥೧॥ ತೆರಿಸ್ಯೆಯ್ಯ ಜೋಳಿಗೆ। ನೋಡಯ್ಯ ಅದರಲ್ಲೀ ಖರಬೂಜುಗಳು ಎರಡು ಇರುವುವೂ ನೋಡೂ ॥೨॥

ವಚನ॥ ಇಂತೆಂದು ಗುರುವರನು ಭೃಗುರಾಯನ ಕೂಡೆ ಹೇಳಲು ರಾಯನು ತಕ್ಷಣಾ ಜೋಳಿಗೆಯನ್ನು ತಂಪಿ ಬಿಚ್ಚಿನೋಡಲು ಅದರಲ್ಲಿ ಖ ಬೂಜದ ಹಣ್ಣೆರಡನ್ನು ಕಂಡು ಆಶ್ಚರ್ಯಪಟ್ಟು ಗುರುದೇವರಿಗೆ ವಂದಿಸಿ ಭೋಜನವಂ ಮಾಡಿಸಿ ಉಡುಗೊರೆಗಳನ್ನು ಕೊಟ್ಟು ಸಂತೋಷಪಡಿಸಲು ಗುರುರಾಯನು ಹೊರಟು ತನ್ನ ಆಶ್ರಮಕ್ಕೆ ಬರಲು ಶನಿದೇವರು ಗುರುಗಳಿಗೆ ಬಂದ್ಯನಮಸ್ಕಾರವನ್ನು ಮಾಡಿ ತಾವು ಹೋದ ಸ್ಥಳದ ವರ್ತಮಾನವೇನೆಂದು ಕೇಳಲು ಗುರುವು ಶನಿದೇ[illegible] ಏನೆಂದು ಹೇಳುತಿರ್ದಾರದೆಂತೆನೆ

ಯಾಲಪದ॥ ಶನಿಯೂ ನಿನ್ನಾ ಮಹಿಮೆಯನ್ನೂ। ಹೇಳುವಾರೇ ಆಗೋದಿಲ್ಲಾ। ನಿನ್ನ ಮಹಿಮೆ। ನೀನೇಬಲ್ಲೆಯೂ॥ ಓ ಶನಿರಾಜ। ಒಂದು ಕಾಲು ಜಾವಾದೊಳಗಿನ್ನೂ ॥೧॥ ಎನ್ನಾ ಪ್ರಾಣಾ ಹೋಗುವಂತೇ। ಇನ್ನು ನೀನೂ ಮಾಡಿಯಿ[illegible] ನೀನೇ ಯೆನ್ನಾ ಪಾರುಮಾಡೀದೇ ॥ ಓ ಶನಿರಾಜ। ನೀನು ಯಿನ್ನಾಗಾ ಕೇಳೋ ಹೇ[illegible]ವೇ ॥೨॥ ನನ್ನಾ ಮೋಗಣ ಅಣೆ ಕೇಳೂ। ನೀನು ಕಷ್ಟ ನರರಿಗಿನ್ನೂ ಕೊಡದಿರು ನೀನು ಎಂದಾನೂ ॥ ಓ ಶನಿರಾಜಾ! ಎನ್ನ ಮಾತು ನಡಿಸೊ ಎಂದಾನು ॥೩॥

ವಚನ॥ ಇಂತೆಂದು ಗುರುರಾಯನು ಶನಿದೇವರಿಗೆ ಹೇಳಲು ಶನಿದೇವರು ಗುರುರಾಯರಿಗೆ ಏನೆಂದು ಹೇಳುತಿರ್ದಾರದೆಂತೆನೆ

ತ್ರಿಪುಡೆ॥ ಗುರುವೆ ನಿನ್ನ ಹ ನಿಮ್ಮ ಚರಣಕೆ। ಎನ್ನ ನಮಸ್ಕಾರವ ಮುನ್ನಿಂದೂ। ಗರ್ವಪುರುಷರಿಗೆ ಪೀಡೆಪಡಿಸುವದು। ಎನ್ನ ಮತವೂ ॥೧॥ ತಮಗೆ ಗರ್ವವು ಬಂದುಯಿತ್ತೂ। ಸ್ವಾಮಿ ಅಧಿಕ ಕಷ್ಟಬಂತೂ॥ ತಮ್ಮ ಬಾಲಕ

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾಡಿದಸಂಧಾ ಪಾಲಿಸಿನ್ನಾ ॥೨॥ ಗುರುವೆನಿಮ್ಮಯ । ಚರಣ ಭಜನೆಯು ಆರು ಮಾಡುವರೋ ಅವರಿಗೆ ನಾನು । ಗುರುವೆಪೀಡಿಸೋದಿಲ್ಲ ಯೆನ್ನುತ । ಹೇಳಿ ಹೊರಟೊ ॥೩॥

ವಚನ ॥ ಇಂತೆಂದು ಶನಿರಾಜನು ಗುರುವಿನ ಅಪ್ಪಣೆಯಂತೆಗೆದು ಕೊಂಡು ಹೊರಟು ಈಶ್ವರನಬಳಿಗೆ ಬಂದು ಏನೆಂದು ಹೇಳುತಿರ್ದಾರದೆಂತೆನೆ

ಏಕತಾಳ । ಶಿವನೆಗಂಗಾಧರನೆ । ಭವರೋಗ ವೈದ್ಯಾನೆ । ದೇವರ ದೇವ ನೀನೇ । ಶಂಭುಲಿಂಗಾನೇ ॥೧॥ ನಿಮ್ಮ ರಾಶಿಗೆ ನಾನು ಬರುವೇನು ಎಂದಾನು ಶಂಕರ ನಮಗೇ ಅಭಯಕೊಟ್ಟು ಕಾಯ್ಯೆಯ್ಯಾ ॥೨॥ ಎನ್ನಲು ಶನಿರಾಜ ಕೇಳಿದ ಶಂಕರಾ ॥ ಇನ್ನು ನೀಬರುವಾಗ । ಹೇಳಿಬಾರೆಂದಾ ॥೩॥ ಹಾಗೆ ಯಾಗಲಿ ಶಿವನೇ । ನಾಳೆಬರುವೆನೂ ॥ ಹೀಗೆಂದ ಶನಿರಾಜ । ಹೇಳಿ ತಾ ಹೋಗೆ ॥೪॥

ವಚನ ॥ ಇಂತೆಂದು ಶನಿರಾಜನು ಈಶ್ವರನ ಕೂಡೆ ನಾಳೆಯದಿನ ಬರುವೆನೆಂದು ಹೇಳಿಹೋಗಲು. ಇತ್ತಲಾ ಈಶ್ವರನು ಕೈಲಾಸಗಿರಿಯಲ್ಲಿ ಆದಿನ ಅಡಗಿ ಕೊಂಡು ಮರುದಿನ ಬಂದು ಶನಿದೇವರಿಗೆ ಈಶ್ವರನು ಏನೆಂದು ಹೇಳುತಿರ್ದಾರ ದೆಂತೆನೆ

ಜಂಪೆ ॥ ಏನೋ ಶನಿರಾಜನೇ । ಏನುಮಾಡಿದೆ ನೀನೂ ॥ ನನ್ನು ಹಿಡಿಯುವೆನೆಂದು । ಬಂದೆ ನೀನಿಂದೂ ॥೧॥ ಶಿವಶಿವಮಹಾದೇವಾ । ಮೂರು ಲೋಕವು ಈಗಾ ॥ ಶಿವನೆ ನಿಮ್ಮಭಯದಿ ॥ ಇರುವುದು ಬೇಗಾ ॥೨॥ ಅಂಥ ಮೂರ್ತಿ ತಾವೂ ! ಕೈಲಾಸಗಿರಿಯೊಳೂ ॥ ಅಡಗಿರಲು ಇನ್ನು । ಹೇಳು ವದೇನೂ ॥ ಅದಕ್ಕಿಂತ ಹೆಚ್ಚಾದ ॥ ಭಯವುಯಾವದು ದೇವಾ । ಕಂಡೆ ನಿಮಗೆ ನಾನು ॥ ಕಾಯೋ ಶಂಕರಾ ॥ ೪ ॥

ವಚನ ॥ ಇಂತೆಂಬ ಶನಿರಾಜನ ಮಾತಿಗೆ ಶಂಕರನು ಮೆಚ್ಚಿ ನೀನು ಮಹಾಬಲವಂತನು ಎಂದು ಆಶೀರ್ವಾದವನ್ನು ಮಾಡಿ ಕಳುಹಿಸಲ

Sri Vidyabharathi Book Centre, Sringeri

CC-O. In Public Domain. Digitized by eGangotri

ಶನಿರಾಜನು ರಾಮಚಂದ್ರನ ರಾಶಿಗೆ ಬಂದು ರಾಮನನ್ನು ವನವಾಸ ಮಾಡಿಸಿದನು ಸೀತಾದೇವಿಗೆ ಗ್ರಹ ಬರಲು ರಾವಣನು ಕದ್ದೊಯ್ದನು ರಾವಣನು ಗ್ರಹಗಳಿಗೆಲ್ಲಾ ಸೆರೆಹಾಕಿರುವನದೆಂತೆನೆ,

ಏಕತಾಳ ॥ ರಾವಣ ಕೇಳಿನ್ನು । ನವಗ್ರಹಗಳಿಗೆಲ್ಲಾ । ಸೆರೆಬಂಧನ ದೊಳುತಾನು । ಹಾಕಿರುವನಂತೇ ॥ ೧ ॥ ತನ್ನ ಮಂಚದಕೆಳಗೆ ॥ ಬೋರಾಲು ಹಾಕಿಸಿ ॥ ತಾನವರಮೇಲೆ । ಮಲಗೂವನು ತೆನೆ.

ವಚನ ॥ ಈ ಪ್ರಕಾರ ನವಗ್ರಹಗಳಿಗೆಲ್ಲಾ ॥ ಸೆರೆಬಂಧನ ಬಂದಿರಲು ನಾರದರು ಹಿಂದಾನೊಂದುದಿನ ಶನಿದೇವರ ಬಳಿಗೆ ಬಂದು ಏನೆಂದು ಹೇಳುತಿರ್ದಾರದೆಂತೆನೆ.

ತ್ರಿವುಡೆ ॥ ಶನಿಯುಕಂಡೂ ನಾರದಹೇಳಿದ । ನೀನು ಬಲವಂತಗ್ರಹ ಕೇಳೈ ॥ ಈಗ ರಾವಣನ ಮಂಚದಡಿಯೊಳು । ಹಾಕಿ ಈಗಾ ॥ ೧ ॥ ನಿಮಗೆ ಕಷ್ಟವು ಕೊಡುವೋನು । ಏನುಮಾಡಿದೆಯೆಂದು ಕೇಳಲೂ ॥ ಸ್ವಾಮಿನಾರದ ಏನುಹೇಳಲಿ ನಮಗಿನ್ನೂ ॥ ೨ ॥ ಬೋರಲಹಾಕಿದ ಋಷಿಯೆಕೇಳಿನ್ನೂ । ಅವನಪಿಡಿಯಲು ಯತ್ನವಿಲ್ಲವೊ ॥ ಅಂಗತಾನಾಗಿ ನಮ್ಮನು ಹಾಕಲು ಆಗಲೀ ಅವಗೇ ॥ ೩ ॥

ವಚನ ॥ ಇಂತೆಂದು ನಾರದರು ಶನಿಯುಕೂಡೆ ಮಾತನಾಡಿ ರಾವಣನ ಬಳಿಗೆ ಬಂದು ಏನೆನ್ನುತಿರ್ದಾರದೆಂತೆನೆ.

ಏಕತಾಳ ॥ ದೈತ್ಯರಾಜನೆಕೇಳು । ತನ್ನ ವೈರಿಗಳಿಗೇ ॥ ಸತ್ಯವೆಣಿಸಲು ಬೇಡಾ । ಕೇಳೈಯ್ಯ ಈಗಾ ॥ ೧ ॥ ನವಗ್ರಹಗಳಿಗೆಲ್ಲ । ಬೋರಾಲು ಹಾಕಿಸೆ ರಾವಣ ಕೇಳೀಗಾ । ಫಲವಿಲ್ಲವೆಂದೇ ॥ ೨ ॥ ತನ್ನವೈರಿಗಳಾ ಎದೆ ಮೆಟ್ಟಿ ನಡಿಯಬೇಕೂ ॥ ನಿನ್ನ ಮನಸು ನಾನೂ । ಹೇಳಿದೆ ಕೇಳೂ ॥ ೩ ॥

ವಚನ ॥ ಇಂತೆಂದು ನಾರದರು ಹೇಳಲು ರಾವಣನು ಹೌದೆಂದು ಆಕ್ಷಣವೇ ಗ್ರಹಗಳನ್ನು ಅಂಗತ್ತನಾಗಿ ಹಾಕಲು ಶನಿದೇವರು ರಾವಣ ರಾಶಿಗೆ ಬಂದಿರದೆಂತೆನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಜಂಪೆ ॥ ಶನಿರಾಜನದೃಷ್ಟಿ । ರಾವಣನಕಡೆಗಾಗೆ ॥ ಆರುತಿಂಗಳೊಳಗೆ ವಂಶವೆಲ್ಲಹೋಗೇ ॥ ೧ ॥ ಹರಿಶ್ಚಂದ್ರನ ಹಿಡಿದು । ಘಾರದುಃಖವು ಕೊಟ್ಟು । ನಾರೀಮಾಗನ ಕ್ರಿಯವು ॥ ಮಾಡಿಸೀಬಿಟ್ಟ ॥ ೨ ॥ ಮಾದಿಗನು ತಾನಾಗ । ಹರಿಶ್ಚಂದ್ರನಕೊಂಡು ॥ ಬೇಗ ಸ್ಮಶಾನಕಾವಲು । ತಾನು ಮಾಡಿಟ್ಟನಾಗ ॥ ೪ ॥ ನಳಚಕ್ರವರ್ತಿಗೆ । ವಕ್ರಿಸೇ ಶನಿರಾಜಾ ॥ರಾಜ್ಯಹೆಂಡರುಹೋಗಿ ಕುರೂಪಿ ತಾನಾದಾ ॥ ೪ ॥ ಇಂದ್ರನಿಗೆ ಹಿಡಿಯಲು । ಸುಂದರಶರೀರವು । ಕಂದಿಗುಂದೀ ಮೈಯೆಲ್ಲ ಯೋನಿಯಾಗಲೂ ॥ ೫ । ವಸಿಷ್ಠನಿಗೆ ಹಿಡಿಯಾಲು । ಸಾಸಿರಪುತ್ರರು ॥ ನಾಶವಾದರು ಕೇಳು । ಶನಿಮಹಿಮೆಯೊ ॥ ೬ ॥ ಚಂದ್ರನಿಗೆ ಗ್ರಹಬಾದೇ । ಕಳಂಕಬಂದಿತು ॥ ಅವಗೇ ಪಾಂಡವರು ರಾಜ್ಯ ಸೋತುಹೋಗೇ ॥ ೭ ॥ ಕೌರವಂಗೆ ಗ್ರಹಬಡಲೂ । ಅವರೆಲ್ಲಿ ಹೋದಾರೂ ॥ ಶನಿಯ ಮಹಿಮೆಯು ಇನ್ನೂ । ಪೇಳೂವೊರ್ಯಾರೂ ॥ ೮ ॥

ವಚನ ಇಂತೆಂದು ವಿಕ್ರಮನಿಗೆ ಶನಿದೇವರು ಇದೆಲ್ಲವನ್ನೂ ಹೇಳಿ ಮತ್ತು ಶ್ರೀ ಕೃಷ್ಣನಿಗೂ ಕಳಂಕವನ್ನು ಹಚ್ಚಿರುವೆನೆಂದು ಎಲ್ಲವನ್ನೂ ಸವಿಸ್ತಾರವಾಗಿ ಹೇಳಿ ಹೊರಟುಹೋಗುವ ಸಮಯದೊಳು ಶನಿದೇವರಿಗೆ ವಿಕ್ರಮನು ಏನೆಂದು ಕೊಂಡಾಡುತಿರ್ದಾನದೆಂತೆನೆ

ತ್ರಿಪುಡೆ ॥ ರಾಜವಿಕ್ರಮಯೆದ್ದು ತಕ್ಷಣಾ । ರಾಜ ಶನಿಯ ಚರಣ ಪಿಡಿದೂ । ಮೂಜಗಕೆ ಬಲವಂತದೇವನೇ । ಕಾಯ್ದಯನ್ನಾ ॥೧॥ ನಾನ ಧನ್ಯನಾದೆ ಕೇಳಿನ್ನು । ನಿನ್ನ ಚರಣವು ಎನಗೆದೊರೆಯಲೂ ॥ ದೀನನಾಥನೆ ಶರಣು ರಕ್ಷಿಸು । ಪಾಲಿಸೆನ್ನಾ ॥೨॥ ಬೇಡಿಕೊಂಬೆನು ವರವ ಪಾಲಿಸೋ ಬೇಡಿದಾವರ ಕೊಡುವದೇನನೇ ॥ ಕಾಡಿಸಬೇಡಾ ಕೇಳು ನರರಿಗೇ । ತಡಿಯೊ ರುಂಟೇ ॥೩॥ ಪರರಹಿಂಸೆಮಾಡೋದಿಲ್ಲ । ನೆಂಬುವಂಥ ವರವ ಪಾಲಿಸೋ ॥ ವರವು ನಿಮಗೆ ನಾನುಬೇಡುವೆ ॥ಇದೇ ಕೇಳೊ ॥೪॥

ವಚನ ॥ ಇಂತೆಂದು ವಿಕ್ರಮನು ಬೇಡಿಕೊಳ್ಳಲು ಶನಿದೇವರು ಸಂತೋಷಭರಿತರಾಗಿ ಏನೆಂದು ಹೇಳುತಿರ್ದಾರದೆಂತೆನೆ

ಏಕತಾಳ॥ ಧನ್ಯಾ ಧನ್ಯಾ ರಾಜಾ ॥ ನಿನ್ನ ಸತ್ಯಕೆ ಯಣೆಯೋ ॥ ಇನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಎಣಿಕೆ ಮಾತ್ರೋ ದ್ಯರೋ । ನಾಕಾಕೇರೂ ॥೧॥ ಭಕ್ತರಾ ನಿನಗೆ ! ಚನ್ನಾಗಿ
ಯಿರುವುದೂ । ಕಂತುಪಿತನೆಬಿಡದೇ । ಕಾಯುದ್ದ ಕೊಳ್ಳೋನು ॥೨॥ ಎನ್ನುತ
ಶನಿರಾಜ । ಪ್ರಸನ್ನನಾದನೂ॥ನಿನು ಬೇಡಿದ ವರವ । ಕೊಡುವೆನೆಂದಾನು ॥
ವಿಕ್ರಮರಾಜ ಕೇಳು । ಅಕ್ಷರದೊಳು ರಾನು ॥ ಈ ಗ್ರಂಥ ಪಠಿಸಲೂ
ಕಾಯೂವೆ ನಾನೂ ॥೪॥ ಇಷ್ಟಾರ್ಥವಕೊಡುವೆ । ಕಷ್ಟವಹರಿಸುವೆ
ನಿಷ್ಠೆಯೊಳ್ ಭಜಿಪರಿಗೆ ಕೇಳು ವಿಕ್ರಮನೇ ॥೫॥ ದ್ವಾದೂಕದೊಳು ನಾನು॥
ಇದ್ದಾಗ್ಯೂ ಕೇಳಿನ್ನೂ ॥ ನಾಶವು ಮಾಡದೆ । ಬಿಟ್ಟುಹೋಗುವೆನೂ ॥೬॥ ಈ
ಮಾತು ಸತ್ಯವು । ಕೇಳುವಿಕ್ರಮನೇ ॥ ಪ್ರೇಮವುಯಿರಬೇಕು । ಈ ಗ್ರಂಥದೊ
ಳಗೇ ॥೭॥ ಈ ಗ್ರಂಥ ಯಾರೊಬ್ಬ ಓದದೆ ಇರಲು ॥ ಸಾಂಗದಿಂ ಪೂಜೆಯು
ಮಾಡುತ ಇರಲೂ ॥೮॥ ಅವರಿಗ ಸಹ ನಾನು। ಕಾಯುವೆ ವಿಕ್ರಮಾ ॥ ಈ
ಮಾತು ಸತ್ಯವು ಎಂದಾ ಶನಿರಾಜಾ ॥೯॥ ಈ ಗ್ರಂಥಕ್ಕೆ ಯಾರು ದೂಷಣೆ
ಮಾಡಲು। ಅವರಿಗೆ ಬಿಡದಂತೆ। ಕಾಡೂವೆನಾನೂ ॥೧೦॥ ಓದಲು ಕೇಳಲು
ಆಲಸ್ಯಪಡವರಿಗೇ ॥ ಅದರಂತೆ ನಾನಿನ್ನೂ । ಮಾಡದೆ ಇರುವೆನೂ ॥೧೧॥

ವಚನ ॥ ಇಂತೆಂದು ವಿಕ್ರಮರಾಜನಿಗೆ ಶನಿದೇವರು ವರವನ್ನು ಕೊಟ್ಟು
ಈ ಗ್ರಂಥದ ಪೂಜಾ ವಿಧಾನವನ್ನು ಮತ್ತು ಫಲವನ್ನೂ ಪೇಳುತಿದ್ದಾರದೆಂತೆನೆ

ಜಂಪೆ॥ ಪ್ರತಿದಿನ ಓದುವಂಗೇ । ಸಂತೃಪ್ತಿ ಪಡಿಸೂವೇ ॥ ಮತ್ತೆ
ನಿರ್ಮಲದಿಂದಾ । ಕೇಳೂವಜನರಿಗೇ ॥೧॥ ಸಾಕಾರವಾಗುವೆ । ಸೌಖ್ಯ
ಸಂಪತ್ತು ಕೊಡುವೆನು ॥ ಬೇಕಾದ ಫಲಗಳನು । ಕೊಟ್ಟು ಕಾಯುವೇನೂ॥೨॥
ಪುತ್ರರ ಕೊಡುವೇವೆನು । ಭಾಗ್ಯವ ಕೊಡುವೇನೂ । ಸತ್ಯಕೇಳಯ್ಯ ಇದು ।
ವಿಕ್ರಮನೆ ನೀನೂ ॥೩॥

ವಚನ ಇಂತು ಈ ಗ್ರಂಥವನ್ನು ಹಗಲಿರುಳೂ ದಿನಂಪ್ರತಿಯೂ ಭಜಿ
ಸಲು ಸಾಗದಿದ್ದಾಗ್ಯೂ ಶನಿವಾರದ ದಿವಸ ಓದುವಂಥಾ ಪೂಜೆಮಾಡುವಂಥಾ
ನರರಿಗೆ ನಾನು ಎಂದಿಗೂ ಪೀಡಿಸುವವನಲ್ಲ ಬೇಡಿದ ವರವನ್ನು ಕೊಡುವೆ
ನೆಂದು ವಿಕ್ರಮನ ಕೂಡೆ ಶನಿದೇವರು ಈ ಮಾತು ಸತ್ಯವೆಂದು ಹೇಳಿ ತಮ್ಮ
ನಿಜಸ್ಥಾನಕ್ಕೆ ಬಿಜಯಂಗೈದರು ಇತ್ತ ವರ್ತಮಾನವನ್ನು ಪೇಳುತಿದ್ದಾರ
ದೆಂತೆನೆ

Sri Vidyabharathi Book Centre, Sringeri

CC-O. In Public Domain. Digitized by eGangotri

ತ್ರಿಪುಡೆ ॥ ರಾತ್ರಿ ಕಳೆದೂ ಉದಯವಾಗಲು । ತಾವ ಲಿಂದಾವುಂಡ ಜನರೂ ॥ ಎಲ್ಲರಿದ್ದರು ಬೆಳಗಾಗಲು । ಆಶ್ಚರ್ಯ ಕಂಡೂ ॥೧॥ ಚಂದ್ರಶಯನ ರಾಜನೆದ್ದನೂ । ಪದ್ಮಾವತಿಯು ಮಂದಿರಕ್ಕೆ ಬಂದನೂ ॥ ಚಂದ್ರ ಬಿಂಬನ ಕಳೆ ಯಿರುವಾ ॥ ವಿಕ್ರಮನ ಕಂಡೂ ॥೨॥ ನೀವು ಯಾರು ಯಾವ ರಾಜ್ಯವು । ಇಲ್ಲಿಬಂದಾ ಬಗೆಯು ಏನೂ । ಎಂದು ಚಂದ್ರಶಯನ ಕೇಳಲೂ। ವಿಕ್ರಮಗೆ ತಾನೂ ॥೩॥ ಕೇಳುತ್ತಿರುವ ಸಮಯದಲಿ । ಪದ್ಮಾವತಿಯು ಮಾಲೆಹಾಕಲೂ ಚಂದ್ರಶಯನ ಕಂಡು ಬೆರಗಾದ ತಾನೂ ॥೪॥

ವಚನ ॥ ಇಂತೆಂದು ಚಂದ್ರಶಯನ ರಾಜನು ವಿಕ್ರಮನನ್ನು ಕಂಡು ನೀವು ಯಾರೆಂದು ವಿಚಾರಿಸಲು ವಿಕ್ರಮರಾಜನು ಚಂದ್ರಶಯನನಿಗೆ ಏನೆಂದು ಪೇಳುತಿರ್ದಾನದೆಂತೆನೆ

ಏಕತಾಳ ॥ ಚಂದ್ರಶಯನಾ ರಾಜಾ । ನಾನಿಮ್ಮಾ ಕಳ್ಳನೂ ॥ ಚಂದದಿಂ ಕರಿಸೈಯ್ಯಾ । ವೈಶ್ಯನಯಿನ್ನೂ ॥೧॥ ಎಂದಾ ಮಾತಿಗೆರಾಯ॥ ಚರಗೆ ಕಳುಹಲೂ । ಭೂಪತಿವೈಶ್ಯಾನು । ಕರಕೊಂಡುಬರಲೂ ॥೨॥ ಬಂದಾನುವೈಶ್ಯಾನು । ರಾಯನಬಳಿಗಾಗಾ । ಕದ್ದಕಳ್ಳನೆ ಇವನೂ । ನೋಡುನೀನೆಂದಾ ॥ ೩ ॥ ಸಾಹುಕಾರನುನುಡಿದಾನು ನಡೀರಿನಮ್ಮ ಮನೆಗೆ ಆವಾಗಕರಕೊಂಡೂ । ಹೊರಟಾನು ತಾನೂ ॥ ೪ ॥

ವಚನ ॥ ಇಂತೆಂದು ಸಾಹುಕಾರನು ಚಂದ್ರಶಯನನು ವಿಕ್ರಮನು ಪುರಜನರು ಮತ್ತು ಮಂತ್ರಿಗಳು ಸಹಾ ವೈಶ್ಯನ ಚಿತ್ರಶಾಲೆಗೆ ಹೋಗಿ ನೋಡಲು ಅಲ್ಲಿನ ವಿಚಿತ್ರವನ್ನು ಪೇಳಿದರು.

ತ್ರಿವುಡೆ ॥ ಚಿತ್ರಶಾಲೆಯೊಳಗೆ ಪೊಕ್ಕರೂ । ಚಿತ್ರಹಂಸವ ನೋಡು ತಿರ್ದರೂ ಕಂತುಪಿತನಾಕರುಣದಿಂದಲೀ । ಹಂಸ ಹಾರಿಬಂದೂ ॥ ೧ ॥ ಗೂಟದಮೇಲೆ ಕುಂತು ಉಗುಳಿತೂ । ಮುತ್ತಿನಹಾರವನೂ ॥ ನೋಟದಲಿ ಎಲ್ಲಾರುನೋಡಲು ॥ ಇದು ಆಶ್ಚರ್ಯವೆಂದೂ ॥ ೨ ॥ ಸಾಹುಕಾರನು ತಾನೂ ನೋಡುತ । ಶಿವಶಿವಶಿವ[illegible] ಭಕ್ತಿಯಿಂದ

Sri Vidyabharathi Book Centre Sringeri

CC-O. In Public Domain. Digitized by eGangotri

ತಾನೂ ಆಲ್ಲೀ ॥ ೩ ॥ ತನ್ನ ಮಗಳಾ . ಕರದಣಾಕ್ಷಣಾ । ಇವಳಿನ್ನು ನಿಮ್ಮ ಗರ್ಭಿತಾ ॥ ನನ್ನ ಕಾಯುನಭಾರ ನಿನ್ನದೂ । ಎಂದೂ ವೈಶ್ಯಾನೂ ॥೪ ನಿಮ್ಮ ಮಹಿಮೆಯು ಕಾಣಲಾತದೇ । ಸುಮ್ಮನೆ ಕಷ್ಟವು ಕೊಟ್ಟೆನೊ ಸ್ವಾಮಿ ವಿಕ್ರಮಯೆಂದು । ಚರಣವಾಪಿಡಿದು ತಾನೂ ॥ ೫ ॥

ವಚನ ॥ ಇಂತೆಂದು ಸಕಲ ಪರಿವಾರವೂ ಈ ಆಶ್ಚರ್ಯವನ್ನು ಕಂಡು ಮುತ್ತಿನಹಾರವನ್ನು ಕದ್ದನೆಂದು ಈ ಮಹಾಪುರುಷನಿಗೆ ಹಿಂಸೆಯನು ಕೊಟ್ಟೆದೂ ಹಾರದ ವಿವರವು ಈಗ ತಿಳಿಯಿತೆಂದು ಜನರು ಆಡುತ್ತಿರಲು ಚಂದ್ರಶಯನರಾಜನು ವಿಕ್ರಮಯೆಂದು ॥ಏನೆಂದು ಕೇಳತಿರ್ದಾರದೆಂತೆನೆ॥ ೫ ॥

ಏಕತಾಳ ॥ ಯಾವುರಾಜ್ಯವು ನಿಮ್ಮದು । ಯಾವದೇಶವಯ್ಯಾ॥ ಯಾವ ಕುಲವು ಹೇಳೀ ॥ ನಾವ ವೇನೆಂದಾ ॥ ೧ ॥ ಎಂದ ಮಾತಿಗ ಆಗಾ। ವಿಕ್ರಮನೂ ನುಡಿದಾನು ಚಂದ್ರಶಯುನನೆ ಕೇಳೂ ॥ ಉಜ್ಜಾನೆಪುರವನೂ ॥ ೨ ॥ ಆಳುವ ದೊರೆನಾನು । ವಿಕ್ರಮನಾಮವು ॥ ಕೇಳಯ್ಯ ಪೇಳುವೆವು ಎಂದು ವಿಕ್ರಮನೂ ॥ ೩ ॥ ಎಂದಮಾತನು ಕೇಳಿ । ಚಂದ್ರಶಯುನಾನಾಗಾ। ಚರಣಕೆವಂದಾನೇ । ಮಾಡಿದಾ ಬೇಗಾ ॥ ೪ ॥ ಗಡಗಡನಡುಗಿದಾ ಘಾಬರಿ ಯಾದಾ ಕಡೆಹಾಯ್ಸವಿಕ್ರಮಾ । ರಾಜನೇಯೆಂದಾ ॥ ೫ । ನಮ್ಮೊಗ್ಗೆ ತಿಳಿಯಾದೆ । ಅನ್ಯಾಯಮಾಡಿದೆ॥ ಸ್ವಾಮಿವಿಕ್ರಮರಾಜಾ । ಕಾಯಬೇಕೆಂದ್ಮ । ೬ ॥ತಾವು ವಿಕ್ರಮರೆಂಬೋ ।ಭಾವವು ತಿಳಿಯದೇ ।ನಾವು ಮಾಡಿದ ತಪ್ಪೂ ಪಾಲಿಸುಯೆಂದಾ ॥ ೬ ॥

ವಚನ ॥ ಇಂತೆಂದು ಚಂದ್ರಶಯುನರಾಜನು ಭಯಭ್ರಾಂತನಾಗಿ ವಿಕ್ರಮನನ್ನು ಕೇಳಿಕೊಳ್ಳಲು ವಿಕ್ರಮರಾಜನು ಏನೆನ್ನು ತಿರ್ದಾನದೆಂತೆನೆ

ಯಾಲಪದ ॥ ಶನಿರಾಜಾನಮ್ಮಾನು । ಪಿಡಿದುಕಷ್ಟ ಕೊಟ್ಟನು ನೀನೇನುಮಾಡಿದೆ ಕೇಳೈಯ್ಯಾ ॥ ಓ ಚಂದ್ರಶಯುನಾ ॥ ಶನಿ ನ ಮಹಿಮೆಯನ್ನೂತಾ ॥ ೧ ॥ಈಗ ಶನಿದೇವಾ ಕೇಳು ನಮ್ಮಾ ಮೇಲೆ ವಾಗೀ । ಭೋಗಭಾಗ್ಯವೆಲ್ಲಾ ದೊರಕೀತು ॥ ಓ ಚಂದ್ರಶಯುನ ರಾಜ್ಯ ನಮ್ಮಗೇ ದೊರಕಿಯೋದೂ! ೨ ॥

Sri Vidyabharathi Book Centre, Sringeri